ಬಂದಿದ್ದಾರೆ...


ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

01 ಅಕ್ಟೋಬರ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -200 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಗುವಾಹಟಿಯಲ್ಲಿ ಬುಧವಾರ ವೆಸ್ಟ್ ಇಂಡೀಸ್ ವಿರುದ್ಧ ನಡೆದ 2ನೇ ಏಕದಿನ ಪಂದ್ಯದಲ್ಲಿ ಶತಕ ಗಳಿಸಿದ ಭಾರತದ ಶುಭಮನ್ ಗಿಲ್ ಹಾಗು ರೋಹಿತ್ ಶರ್ಮಾ(101)...



ಸುಧಾರಿತ ಸಮಾಜದ ನಿಜವಾದ ಕನ್ನಡಿ » 2


ಕುಡಿಯುವ ನೀರಿನ ಸಮಸ್ಯೆ ತೀವ್ರ : ಪರಿಹಾರಕ್ಕೆ ಆಗ್ರಹ » 3


ಸ್ಟಾರ್ಟ್‌ಅಪ್ ಉತ್ತೇಜನಕ್ಕೆ ಗವರ್ನಮೆಂಟ್ ಫಸ್ಟ್ ಉಪಕ್ರಮ » 4


# ಆರ್ಥಿಕ ಅವ್ಯವಸ್ಥೆಗೆ ಯಡಿಯೂರಪ್ಪ ಸರ್ಕಾರ ಕಾರಣ

## ಹಣ ಇಲ್ಲದಿದ್ದರೂ ಯೋಜನೆ ಘೋಷಣೆ | ಮುಖ್ಯಮಂತ್ರಿ ಡಿ.ಕೆ.ಶಿ. ಆರೋಪ

• ಪ್ರಜೋದಯ ವರದಿ

**ಚಾಮರಾಜನಗರ:** ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರದ ಬಳಿ ಹಣ ಇಲ್ಲದಿದ್ದರೂ ಬಹಳಷ್ಟು ಯೋಜನೆಗಳನ್ನು ಘೋಷಣೆ ಮಾಡಲಾಗಿದ್ದು, ಎಲ್ಲಾ ಕಾಮಗಾರಿಗಳು ಮುಕ್ತಾಯ ಹಂತಕ್ಕೆ ಬಂದಿರುವುದರಿಂದ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆರೋಪಿಸಿದರು.

ವಿವಿಧ ಕಾಮಗಾರಿ ಉದ್ಘಾಟನೆ ಹಾಗು ಶಂಕುಸ್ಥಾಪನಾ ಸಮಾರಂಭಕ್ಕೆ ಬುಧವಾರ ಕೊಳ್ಳೇಗಾಲಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಅವಧಿಯಲ್ಲಿ ಆಗಿರುವ ಅನಾಹುತಗಳ ಪರಿಣಾಮ ಆರ್ಥಿಕ ಸಂಪನ್ಮೂಲ ಕೊರತೆಯಾಗಿರುವ ಬಗ್ಗೆ ಆರ್ಥಿಕ ಇಲಾಖೆ ಸರ್ಕಾರಕ್ಕೆ ಪತ್ರ ಬರೆದಿದೆ, ಆದರೂ ಗುತ್ತಿಗೆದಾರರ ಹಿತದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುವುದೆಂದರು.

ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘ ಕಮಿಷನ್ ಆರೋಪ ಮಾಡಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿ, ಆರೋಪ ಸಂಬಂಧ ತನಿಖೆ ನಡೆಸಲಾಗುವುದು. ಯಡಿಯೂರಪ್ಪ ಸರ್ಕಾರದ ಅವಧಿಯಲ್ಲಿ ಕೊಟ್ಟ ಕೆಲಸಗಳು ಮುಗಿಯುತ್ತಿದ್ದು, ಬಿಲ್ ನೀಡಬೇಕಾಗಿದೆ. ನಾನು ಅದರ ಬಗ್ಗೆ ಆಲೋಚನೆ ಮಾಡುವೆ. ಗುತ್ತಿಗೆದಾರರು ಉಳಿಯಬೇಕು. ಹೀಗಾಗಿ ಸಧ್ಯದಲ್ಲೇ ಆಲೋಚನೆ ಮಾಡುತ್ತೇನೆಂದರು.

ಈಗಲೂ ಕಮಿಷನ್ ನೀಡಬೇಕೆಂಬ ಗುತ್ತಿಗೆದಾರರ ಸಂಘದ ಆರೋಪಕ್ಕೆ ನಾನು ಏನೂ ಹೇಳುವುದಿಲ್ಲ. ಅವರು ಅಫಿಡವಿಟ್ ಸಲ್ಲಿಸಲಿ. ಈ ಬಗ್ಗೆ ತನಿಖೆ ಮಾಡಿಸಲಾಗುವುದು. 490 ಕೋ. ರೂ. ಮೊತ್ತದ ನೀರಾವರಿ ಯೋಜನೆ ಶಂಕುಸ್ಥಾಪನೆ ವಿಚಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗಬೇಕು. ಅನೇಕ ಸಮಿತಿಗಳಿದ್ದು, ಅಲ್ಲೂ ಚರ್ಚೆಯಾಗಬೇಕು. ನಂತರ ಮಂಡಳಿಗಳಲ್ಲಿ ಅನುಮತಿ ಪಡೆದು, ಸಚಿವ ಸಂಪುಟ ಅನುಮತಿ ಪಡೆದು ಟೆಂಡರ್ ಕರೆಯಬೇಕು. ಆ ಬಳಿಕ ಕಾಮಗಾರಿ ಆರಂಭಿಸಲಾಗುವುದು. ಅದಕ್ಕೆ ಸಾಕಷ್ಟು ಪ್ರಕ್ರಿಯೆಗಳಿವೆ ಎಂದು ವಿವರಿಸಿದರು.



**ಆಯೋಗ ಪ್ರಜಾಸತ್ತಾತ್ಮಕವಾಗಿಲ್ಲ**

ಕೇಂದ್ರ ಚುನಾವಣಾ ಆಯೋಗ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ನೇಮಿಸಿದ್ದ ಇಬ್ಬರು ಆಯುಕ್ತರು ಎಸ್‌ಐಆರ್ ಕುರಿತು ಅಪಸ್ವರ ಎತ್ತಿದ್ದಾರೆ. ಪ್ರಕ್ರಿಯೆಯಲ್ಲಿ ತಪ್ಪುಗಳಾಗಿವೆ ಎಂಬುದು ಸಾಬೀತಾಗಿದೆ. ಜನರ ಭಾವನೆ, ಬಡವರು, ಅಲ್ಪಸಂಖ್ಯಾತರ ಮತದಾನದ ಹಕ್ಕು ಕಸಿಯುವ ಕೆಲಸ ವಾಗುತ್ತಿದೆ. ಅದರ ವಿರುದ್ಧ ನಮ್ಮ ಹೋರಾಟ ಮುಂದುವರಿಯುತ್ತದೆಂದರು.

> **"ಹೊರ ರಾಜ್ಯದವರು ಗೃಹಲಕ್ಷ್ಮಿ ಯೋಜನೆ ಲಾಭ ಪಡೆಯುತ್ತಿದ್ದಾರೆಂಬ ಕಾರಣಕ್ಕೆ ನಾವು ಹೊಸ ಅರ್ಜಿ ಸಿದ್ಧಪಡಿಸಿದ್ದೇವೆ. ಯಾರು ನಮ್ಮ ಮತದಾರರು, ಅರ್ಹರಿದ್ದಾರೆ ಅವರನ್ನು ಪರಿಗಣಿಸಲಾಗುವುದು. ಇನ್ನು ಮರುಪರಿಶೀಲನೆ ಅರ್ಜಿ ವಿತರಣೆ ಮಾಡಿಲ್ಲ.**
> **-ಡಿ.ಕೆ.ಶಿವಕುಮಾರ್, ಸಿ.ಎಂ.**

**ಸರ್ಕಾರಕ್ಕೆ ಗಡುವು ನೀಡಿದ ಗುತ್ತಿಗೆದಾರರು**

ರಾಜ್ಯದ ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ವರ್ಷಗಳೇ ಕಳೆದರೂ ಬಿಲ್ ಪಾವತಿಯಾಗಿಲ್ಲವೆಂದು ಆರೋಪಿಸಿರುವ ರಾಜ್ಯ ಗುತ್ತಿಗೆದಾರರ ಸಂಘ 38 ಸಾವಿರ ಕೋ.ರೂ. ಬಾಕಿ ಮೊತ್ತವನ್ನು ಡಿಸೆಂಬರ್ ಅಂತ್ಯದೊಳಗೆ ಬಿಡುಗಡೆ ಮಾಡಬೇಕೆಂದು ಗಡುವು ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ 10 ದಿನಗಳ ಹಿಂದೆ ಮನವಿ ಸಲ್ಲಿಸಿದ್ದರೂ ಪ್ರತಿಕ್ರಿಯೆ ಬಂದಿಲ್ಲ. 1.5 ಲಕ್ಷ ಗುತ್ತಿಗೆದಾರರು ಹಲವು ವರ್ಷಗಳಿಂದ ಬಾಕಿ ಹಣಕ್ಕಾಗಿ ಕಾಯುತ್ತಿದ್ದಾರೆ ಎಂದರು.

**ಕಮಿಷನ್ ನೀಡಿದರಷ್ಟೇ ಬಿಲ್**

ಕೆಲವು ಅಧಿಕಾರಿ ಹಾಗು ರಾಜಕಾರಣಿಗಳಿಗೆ ಕಮಿಷನ್ ನೀಡಿದರೆ ಮಾತ್ರ ಬಿಲ್ ಮಾಡಲಾಗುತ್ತಿದೆ ಎಂದು ಗುತ್ತಿಗೆದಾರ ರ ಸಂಘ ಆರೋಪಿಸಿದೆ. ಮುಖ್ಯ ಮಂತ್ರಿ ಸಭೆ ಕರೆದರೆ ಯಾವ ಇಲಾಖೆಯಲ್ಲಿ ಎಷ್ಟು ಕಮಿಷನ್ ಕೇಳಲಾಗುತ್ತಿದೆ ಎಂಬು ದನ್ನು ಬಹಿರಂಗಪಡಿಸುತ್ತೇವೆ. ಅಗತ್ಯ ವಿದ್ದರೆ ದಾಖಲೆಗಳನ್ನು ಬಿಡುಗಡೆ ಮಾಡುವುದಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಅವರು ಹೇಳಿದರು.

ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ 31 ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು. ಡಿಸೆಂಬರ್ ಅಂತ್ಯದೊಳಗೆ ಬಾಕಿ ಹಣ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಿದರು.

# ಸೈಡ್ ವಿಂಗ್ ನಾಲಿಗೆಗಳಿಂದ ವ್ಯರ್ಥ ಸಮರ್ಥನೆ: ಹೆಚ್.ಡಿ.ಕೆ.

• ಪ್ರಜೋದಯ ವರದಿ



**ಬೆಂಗಳೂರು:** ನೈಸ್ ಯೋಜನೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಕ್ರಮ ಎಸಗಿರುವ ಕುರಿತು ದಾಖಲೆಗಳು ಸ್ಪಷ್ಟವಾಗಿದ್ದರೂ ಕೆಲ ಸೈಡ್ ವಿಂಗ್ ನಾಲಿಗೆಗಳು ವ್ಯರ್ಥ ಸಮರ್ಥನೆಗೆ ಇಳಿದಿವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ (ನೈಸ್) ಯೋಜನೆಯಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆದಿದೆ ಎಂಬ ಕುಮಾರಸ್ವಾಮಿ ಅವರ ಆರೋಪಕ್ಕೆ ರಾಜ್ಯ ಸರ್ಕಾರದ ಸಚಿವರ ಹೇಳಿಕೆಯನ್ನು ಬುಧವಾರ ಟೀಕಿಸಿರುವ ಅವರು, ದಾಖಲೆಗಳು ಸ್ಪಷ್ಟವಾಗಿದ್ದರೂ, ಕೆಲ ಸೈಡ್ ವಿಂಗ್ ನಾಲಿಗೆಗಳು ವ್ಯರ್ಥ ಸಮರ್ಥನೆಗೆ ಇಳಿದಿವೆ. ಪಾಪ.. ಅವಕ್ಕೆ ವಿದ್ಯೆಬುದ್ಧಿ ಗೊತ್ತಿಲ್ಲ. ದಾಖಲೆಗಳನ್ನು ಓದಿಕೊಳ್ಳುವ ಬೌದ್ಧಿಕ ಸಾಮರ್ಥ್ಯವು ಇಲ್ಲ. ಆದರೂ ಮಂತ್ರಿಗಳಾಗಿದ್ದಾರೆ. ಅಕ್ರಮ ಸಂಪತ್ತು ಗಳಿಸಿದ ಸಾಹೇಬರನ್ನು ಸಮರ್ಥಿಸಿಕೊಳ್ಳದಿದ್ದರೆ, ಮುಂದುವರಿಯಲು ಸಾಧ್ಯವಾಗುವುದಿಲ್ಲವೆಂಬ ಭಯದಿಂದಲೇ ಕಿರುಚುತ್ತಿವೆ ಎಂದಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಕಾಲದಲ್ಲಿ ಏನಾಯ್ತು. ಜೆ.ಹೆಚ್.ಪಟೇಲ್‌ರ ಕಾಲದಲ್ಲಿ ಏನಾಯ್ತು. ಆ ನಂತರ ಬಂದ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪದವೀಧರರ ಸರ್ಕಾರದಲ್ಲಿ ಮುಖ್ಯಮಂತ್ರಿ ಮಹಾಶಯ ನಗರಾಭಿವೃದ್ಧಿ ಸಚಿವರಾಗಿ, ಬಿಎಂಐಸಿಪಿಎ ಅಧ್ಯಕ್ಷರಾಗಿ ಎಸಗಿರುವ ಅಕ್ರಮಗಳನ್ನು ದಾಖಲೆಗಳೇ ಸಾರಿ ಸಾರಿ ಹೇಳುತ್ತಿವೆ ಎಂದರು.

# ಹಾಸನಾಂಬ ಮಹೋತ್ಸವಕ್ಕೆ ರಾಷ್ಟ್ರಮಟ್ಟದ ಪ್ರಚಾರ

## ಕೇಂದ್ರ ಪ್ರವಾಸೋದ್ಯಮ ಸಚಿವರಿಗೆ ಶ್ರೇಯಸ್ ಪಟೇಲ್ ಮನವಿ

• ಪ್ರಜೋದಯ ವರದಿ

**ಹಾಸನ :** ಹಾಸನಾಂಬ ಮಹೋತ್ಸವಕ್ಕೆ ರಾಷ್ಟ್ರ ಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅ. 29ರಿಂದ ನ.11ರವರೆಗೆ ಜಾತ್ರೆ ನಡೆಯಲಿದ್ದು, ರಾಜ್ಯ, ದೇಶದ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಮಹೋತ್ಸವಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ತ್ವರಿತ ಪ್ರಚಾರ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಇನ್‌ಕ್ರೆಡಿಬಲ್ ಇಂಡಿಯಾ ಜಾಲತಾಣ, ಅಧಿಕೃತ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಹಾಸನಾಂಬೆ ಮಹೋತ್ಸವದ ಕುರಿತು ಪ್ರಚಾರ ಕೈಗೊಳ್ಳಬೇಕು. ದೂರದರ್ಶನ, ಆಕಾಶವಾಣಿ ಸೇರಿ ಸರ್ಕಾರಿ ಪ್ರಚಾರ ಮಾಧ್ಯಮಗಳಲ್ಲಿಯೂ ಮಹೋತ್ಸವದ ಮಾಹಿತಿ ಪ್ರಸಾರ ಮಾಡುವಂತೆ. ಇಂಗ್ಲೀಷ್, ಹಿಂದಿ ಹಾಗು ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಪ್ರಚಾರ ಚಿತ್ರಗಳು ಮತ್ತು ಡಿಜಿಟಲ್ ಮಾಹಿತಿ ಸಿದ್ಧಪಡಿಸಿ ದೇಶದ ವಿವಿಧ ಭಾಗಗಳ ಪ್ರವಾಸಿಗರಿಗೆ ತಲುಪಿಸಬೇಕು. ರಾಷ್ಟ್ರೀಯ ಪ್ರವಾಸೋದ್ಯಮ ಸಂಸ್ಥೆಗಳು, ಪ್ರವಾಸ ನಿರ್ವಾಹಕರು ಹಾಗು ಮಾಧ್ಯಮಗಳ ಗಮನ ಸೆಳೆಯುವ ಮೂಲಕ ಮಹೋತ್ಸವವನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕೆಂದು ಮನವಿ ಮಾಡಿದ್ದಾರೆ.



ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಮೂಲಕ ವಿಶೇಷ ಪ್ರಚಾರ ಕಾರ್ಯತಂತ್ರ ರೂಪಿಸಬೇಕು. ಮಹೋತ್ಸವಕ್ಕೆ ಕೆಲವೇ ದಿನಗಳು ಬಾಕಿ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿ, ರಾಷ್ಟ್ರಮಟ್ಟದ ಪ್ರಚಾರಕ್ಕೆ ತ್ವರಿತ ಕ್ರಮ ಕೈಗೊಳ್ಳಬೇಕು. ಇದರಿಂದ ಮಹೋತ್ಸವದ ಜೊತೆಗೆ ಜಿಲ್ಲೆಯ ಐತಿಹಾಸಿಕ, ಧಾರ್ಮಿಕ ಹಾಗು ಪ್ರವಾಸಿ ತಾಣಗಳಿಗೂ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗಲಿದೆ ಎಂದು ತಿಳಿಸಿದ್ದಾರೆ.

# ವಿಮಾನ ನಿಲ್ದಾಣ, ಆಸ್ಪತ್ರೆ ಕಾಮಗಾರಿ ಚುರುಕುಗೊಳಿಸಿ

## ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡುವಂತೆ ಅಬಕಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಬುಧವಾರ ವಿಕಾಸಸೌಧದಲ್ಲಿ ಸಭೆ ನಡೆಸಿ, ವಿಮಾನ ನಿಲ್ದಾಣದ ಕಾಮಗಾರಿ ಹಾಗು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪ್ರಗತಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ಜಿಲ್ಲೆಯಲ್ಲಿ ಆದಷ್ಟು ಶೀಘ್ರವಾಗಿ ವಿಮಾನ ಸೇವೆ ಆರಂಭಗೊಳ್ಳಬೇಕೆಂಬುದು ಸರ್ಕಾರದ ಆಶಯವಾಗಿದೆ. ವಿಮಾನ ನಿಲ್ದಾಣ ಯೋಜನೆಗೆ ಕೇಂದ್ರ ಸರ್ಕಾರದಿಂದ ಪರಿಸರ ಅನುಮತಿ ಪಡೆಯಲು ಸಮರ್ಪಕ ಪ್ರಯತ್ನ ನಡೆಸಲಾಗುವುದು ಎಂದರು.



ಯೋಜನೆ ವಿಳಂಬವಾಗುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಯಾವುದೇ ಯೋಜನೆ ಕಾರ್ಯರೂಪಕ್ಕೆ ಬರುವ ಮುನ್ನವೇ ಎದುರಾಗಬಹುದಾದ ಅಡಚಣೆಗಳನ್ನು ಪೂರ್ವಭಾವಿಯಾಗಿ ಗುರುತಿಸಿ ಪರಿಹರಿಸಿಕೊಳ್ಳಬೇಕು. ಯೋಜನೆ ಆರಂಭಿಸಿದ ಬಳಿಕ ಸಮಸ್ಯೆಗಳ ನಿವಾರಣೆಗೆ ಮುಂದಾದರೆ ಕಾಮಗಾರಿ ಮತ್ತಷ್ಟು ಕಗ್ಗಂಟಾಗಲಿದೆ ಎಂದರು.

ರನ್‌ವೇ ವಿಸ್ತರಣೆಗೆ ಸಂಬಂಧಿಸಿದಂತೆ ಬಾಕಿ ಇರುವ 98 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು. ನೀರು, ವಿದ್ಯುತ್, ವಿದ್ಯುತ್ ಜಾಲ, ರಸ್ತೆ ಸಂಪರ್ಕ ಸೇರಿ ಅಗತ್ಯ ಮೂಲ ಸೌಕರ್ಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಕಾಮಗಾರಿಗಳು ವಿಳಂಬವಾಗಬಾರದು. ಭೂಮಿ ಕಳೆದುಕೊಂಡ ರೈತರು ಕಣ್ಣೀರು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕೆಂದು ನಿರ್ದೇಶನ ನೀಡಿದರು.

**ಜನವರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ**

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, ಡಿಸೆಂಬರ್‌ನಲ್ಲಿ ಕಾಮಗಾರಿ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ. ಜನವರಿಯಲ್ಲಿ ಉದ್ಘಾಟನಾ ಸಮಾರಂಭ ನಡೆಸುವ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಬಹುದು. ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಕಾಮಗಾರಿಯೂ ಪೂರ್ಣಗೊಂಡು ಉದ್ಘಾಟನೆಗೊಳ್ಳುವಂತಾದರೆ ಸಮಾಧಾನವಾಗಲಿದೆ ಎಂದು ಸಚಿವರು ಹೇಳಿದರು.

**ಆಸ್ಪತ್ರೆ ಕಾಮಗಾರಿ ಪ್ರಗತಿ ಪರಿಶೀಲನೆ**

ಇದೇ ವೇಳೆ ಹಾಸನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಚಿವರು ಅಧಿಕಾರಿಗಳಿಗೆ ಹಲವು

» ನಾಲ್ಕನೇ ಪುಟದಲ್ಲಿ

# ಕ್ಯಾತನಹಳ್ಳಿ ಏತ ನೀರಾವರಿ: ಕ್ರೆಡಿಟ್ ವಾರ್

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಹಲವು ಹಳ್ಳಿಗಳ 3,500 ಎಕರೆ ಪ್ರದೇಶಕ್ಕೆ ನೀರು ಒದಗಿಸುವ ಕ್ಯಾತನಹಳ್ಳಿ ಏತ ನೀರಾವರಿ ಮೊದಲ ಹಂತದ ನೀರು ಹರಿಸುವ ಪ್ರಾಯೋಗಿಕ ಚಾಲನೆಗೆ ಹಾಲಿ ಹಾಗು ಮಾಜಿ ಶಾಸಕರ ನಡುವೆ ಕ್ರೆಡಿಟ್ ವಾರ್ ಜೋರಾಗಿದೆ.

ಮಾಜಿ ಶಾಸಕ ದಿ. ಹೆಚ್.ಎಸ್. ಪ್ರಕಾಶ್ ಅವರ ಕನಸಿನ ಅವಧಿಯಲ್ಲಿ ರೂಪುಗೊಂಡ ಏತ ನೀರಾವರಿ ಯೋಜನೆ ಇನ್ನು ಪೂರ್ಣಗೊಂಡಿಲ್ಲ. 2006 ರಿಂದ ಇಲ್ಲಿವರೆಗೆ ವಿವಿಧ ಹಂತಗಳಲ್ಲಿ ಕೆಲಸ ನಡೆಯುತ್ತಿದ್ದು, ಯಗಚಿ ನದಿಯಿಂದ ನೀರು ಹರಿಸಲು ನಿರ್ಧರಿಸಲಾಗಿದೆ. ಈ ವರ್ಷ ಭೀಕರ ಬರಗಾಲ ಆವರಿಸಿರುವುದರಿಂದ ರೈತರು ಕಾಮಗಾರಿ ಪೂರ್ಣಗೊಳಿ ಸಲು ಒತ್ತಾಯಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ನೀರು ಹರಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದರಿಂದ ಕೆಲಸ ಕೈಗೊಳ್ಳಲಾಗಿತ್ತು. ಆ ಹಿನ್ನಲೆಯಲ್ಲಿ ಬುಧವಾರ ಪ್ರಾಯೋಗಿಕ ನೀರು ಹರಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅ. 5ರಂದು ಜಿಲ್ಲಾ ಉಸ್ತುವಾರಿ ಸಚಿವರೇ ಮೋಟಾರ್‌ಗೆ ಚಾಲನೆ ನೀಡಲಿದ್ದಾರೆ.



**ಹಾಲಿ-ಮಾಜಿ ಶಾಸಕರ ಸಮಾಗಮ**

ಕ್ಯಾತನಹಳ್ಳಿ ಗ್ರಾಮದಲ್ಲಿರುವ ಪಂಪ್‌ಹೌಸ್‌ಗೆ ಬುಧವಾರ ಹಾಲಿ ಶಾಸಕ ಹೆಚ್.ಪಿ.ಸ್ವರೂಪ್, ಮಾಜಿ ಶಾಸಕ ಪ್ರೀತಮ್ ಗೌಡ ಅವರು ಆಗಮಿಸಿದ್ದರು. ಹಳೇಬೀಡಿನ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ರೈತ ಸಂಘದ ಜಿಲ್ಲಾಧ್ಯಕ್ಷ ಕಣಗಾಲ್ ಮೂರ್ತಿ ಮತ್ತಿತರರು ಸ್ಥಳದಲ್ಲಿದ್ದ ಸಂದರ್ಭದಲ್ಲಿ ಸ್ಥಳಕ್ಕೆ ಮಾಜಿ ಶಾಸಕ ಪ್ರೀತಮ್ ಗೌಡ ಬಂದರು. ಆ ಬಳಿಕ ಶಾಸಕ ಹೆಚ್.ಪಿ. ಸ್ವರೂಪ್ ಆಗಮಿಸಿದರು. ಇಬ್ಬರು ನಾಯಕರು ಬಂದಾಗ ಜಮಾಯಿಸಿದ್ದ ಬೆಂಬಲಿಗರು ಇಬ್ಬರೂ ನಾಯಕರಿಗೆ ಜೈಕಾರ ಘೋಷಿಸಿದರು.

**ಗೊಂದಲದಲ್ಲಿ ಅಧಿಕಾರಿಗಳು**

ಪಂಪ್‌ಹೌಸ್‌ನಲ್ಲಿ ಎಲೆಕ್ಟ್ರಿಷಿಯನ್ ಕೆಲಸಗಳು ಇನ್ನು ಮುಂದುವರಿದಿದ್ದು ಏಕಾಏಕಿ ನೂರಾರು ಸಂಖ್ಯೆಯಲ್ಲಿ ಜನರು ಸೇರಿದ್ದರಿಂದ ಅಧಿಕಾರಿಗಳು ಗೊಂದಲಕ್ಕೆ ಒಳಗಾದರು. ಪ್ರಯೋಗಾರ್ಥ ಚಾಲನೆಗೆ ಯಾರನ್ನು ಆಹ್ವಾನಿಸಬೇಕೆಂಬ ಇಕ್ಕಟ್ಟಿಗೆ ಸಿಲುಕಿದ ಅವರು ಬೆಂಬಲಿಗರ ಕೂಗಾಟಕ್ಕೆ ಹೈರಾಣಾದರು. ಪಂಪ್‌ಹೌಸ್ ಕೊಠಡಿಯಿಂದ ಹೊರಗೆ ನಿಂತಿದ್ದ ಸ್ವರೂಪ್ ಅವರನ್ನು ಪುಷ್ಪಗಿರಿ ಮಠದ ಸ್ವಾಮೀಜಿಯೇ ಒಳಗೆ ಕರೆದುಕೊಂಡು ಬಂದರು. ನಂತರ ಸಾಮೂಹಿಕವಾಗಿ ಪ್ರಾಯೋಗಿಕ ನೀರು ಹರಿಸಲಾಯಿತು.

# ಅ.2ರಂದು ಸರ್ಕಾರಿ ನೌಕರರ ಸದಸ್ಯರ ಸಮಾಗಮ




• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಅ.2ರಂದು ಸದಸ್ಯರ ಸಮಾಗಮ ಸಮಾರಂಭ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಆದಿಚುಂಚನಗಿರಿ ಸಮುದಾಯ

» ನಾಲ್ಕನೇ ಪುಟದಲ್ಲಿ

# ಮಲೆನಾಡಿನಲ್ಲಿ ನಿರಾಶೆ ಮೂಡಿಸಿದ ಮಳೆ

- ಹನಿ ನೀರಾವರಿ ಮೊರೆ ಹೋದ ಕಾಫಿ ಬೆಳೆಗಾರರು
- ಕಾಳು ಮೆಣಸಿಗೂ ತೊಂದರೆ



• ಪ್ರಜೋದಯ ವರದಿ

ಹಾಸನ: ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟ ಬಳಿಕ ಸಕಲೇಶಪುರ ಭಾಗದಲ್ಲಿ ಎರಡು ದಿನಗಳ ಹಿಂದೆ ಸುರಿದ ಮಳೆ ಆಶಾಭಾವ ಮೂಡಿಸಿತ್ತಾದರೂ ಮತ್ತೆ ಬಿಸಿಲು ಆವರಿಸಿರುವುದರಿಂದ ನಿರಾಶೆಯ ಛಾಯೆ ಆವರಿಸಿದೆ.

ವರುಣನ ಮುನಿಸು ವಾಣಿಜ್ಯ ಬೆಳೆಗಳ ಮೇಲೆ ನೇರ ಪರಿಣಾಮ ಬೀರಿದ್ದು, ಕಾಫಿ ಹಣ್ಣಾಗುವ ಹಂತ ತಲುಪಿದೆ. ಪ್ರಸಕ್ತ ದಿನಗಳಲ್ಲಿ ಮಳೆ ಅಥವಾ ನೀರಿನ ಕೊರತೆಯಾದರೆ ಕಾಫಿ ಹಣ್ಣಿನಲ್ಲಿ ನೀರಿನಾಂಶ ಕುಸಿತವಾಗಿ ಹಣ್ಣಿನ ತೂಕ ಕಡಿಮೆಯಾಗಲಿದೆ. ಅದರಿಂದ ಓ.ಟಿ. ಔಟ್ ಟನ್ ಮೇಲೆ ಪರಿಣಾಮ ಬೀರಲಿದೆ. ಔಟ್‌ಟನ್ ಕಡಿಮೆಯಾದರೆ ದರದ ಮೇಲೆ ನೇರ ಪರಿಣಾಮ ಬೀರಲಿದೆ. ಸಾಕಷ್ಟು ಬೆಳೆಗಾರರು ಹನಿ ನೀರಾವರಿಗಾಗಿ ಮುಗಿಬಿದ್ದಿದ್ದು ಮಳೆಗಾಲದಲ್ಲೇ ಕಾಫಿ ತೋಟಗಳಿಗೆ ಹನಿ ನೀರಾವರಿ ಮಾಡುತ್ತಿರುವ ದೃಶ್ಯ ಅಲ್ಲಲ್ಲಿ ಕಾಣಸಿಗುತ್ತಿದೆ.

ಮೆಣಸಿನ ಬೆಳೆಗೆ ನೀರು ಅತ್ಯುತ್ತಮ ಔಷಧ. ನೀರಿನ ಕೊರತೆ ಎದುರಾದರೆ ಹಳದಿ ರೋಗ ಸೇರಿ ಹಲವು ರೋಗಗಳು ಮೆಣಸಿನ ಬಳ್ಳಿಗಳನ್ನು ಆವರಿಸಿಕೊಳ್ಳುವುದರಿಂದ ಬೆಳೆ ಒಂದೇ ವರ್ಷದಲ್ಲಿ ನಾಮಾವಶೇಷವಾಗುವ ಆತಂಕ ಕಾಡುತ್ತಿದೆ. ಆದರೆ, ಈ ಬಾರಿ ಮಳೆಗಾಲದಲ್ಲೇ ಬಳ್ಳಿಗಳು ನೀರಿನ ಕೊರತೆ ಎದುರಿಸುತ್ತಿದ್ದು, ಬಳ್ಳಿಗಳನ್ನು ಉಳಿಸಿಕೊಳ್ಳಲು ಹನಿ ನೀರಾವರಿ ಮಾಡಬೇಕಿದೆ. ಆದರೆ, ಇದು ಅಸಾಧ್ಯದ ಕೆಲಸವಾಗಿದ್ದು ಮುಂದಿನ ಎಂಟು ತಿಂಗಳಿಗೆ ಅಪಾರ ಪ್ರಮಾಣದ ನೀರಿನ ಮೂಲ ಅಗತ್ಯವಿದೆ. ಆದರೆ, ಈ ಬಾರಿ ಡಿಸೆಂಬರ್ ತಿಂಗಳ ವೇಳೆಗೆ ಬಹುತೇಕ ನೀರಿನ ಮೂಲಗಳು ಬರಿದಾಗುವ ಸೂಚನೆ ಇದ್ದು ಬಹುತೇಕ ಪ್ರಮುಖ ನದಿ ಮೂಲಗಳೇ ಒಣಗುವ ಸಾಧ್ಯತೆ ಇರುವುದರಿಂದ ಕಾಳು ಮೆಣಸಿನ ಬಳ್ಳಿಗಳಿಗೆ ಹನಿ ನೀರಾವರಿ ವ್ಯವಸ್ಥೆ ಕನಸಿನ ಮಾತಾಗಿದೆ. ಕಾಳು ಮೆಣಸು ಕಾಯಿ ಕಟ್ಟುವ ಕೆಲಸಕ್ಕೂ ನೀರಿನ ಆಶ್ರಯ ಬೇಕಿದೆ. ನೀರಿನ ಕೊರತೆ ಎದುರಾದರೆ ಕಾಯಿಗಳು ಜೊಳ್ಳಾಗುತ್ತವೆಂಬ ಮಾತು ಬೆಳೆಗಾರರದ್ದಾಗಿದೆ.

ಏಲಕ್ಕಿ ಸಹ ಮಳೆ ಕೊರತೆ ಎದುರಿಸುತ್ತಿದ್ದು ಗರಿ ಮೂಡಲು ಮಳೆ ಬೇಕು. ಗರಿ ಮೂಡದಿದ್ದರೆ ಮುಂದಿನ ಹಂಗಾಮಿನಲ್ಲಿ ಏಲಕ್ಕಿ ಬೆಳೆ ಕನಿಷ್ಟ ಇಳುವರಿಗೆ ಇಳಿಯಲಿದೆ. ಅಲ್ಲದೆ ತೋಟದಲ್ಲಿ ಕನಿಷ್ಟ ತೇವಾಂಶವಿಲ್ಲದಿದ್ದರೆ ಇರುವೆ ಸೇರಿ ಹಲವು ಜಾತಿಯ ಜೀವಜಂತುಗಳು ಏಲಕ್ಕಿ ಬೆಳೆಗಳಿಗೆ ತಗುಲುವ ಸಾಧ್ಯತೆ ಹೆಚ್ಚಿದೆ.

ತಾಲ್ಲೂಕಿನಲಿ ಕನಿಷ್ಟ ಮಳೆ ಸುರಿಯುವ ಪ್ರದೇಶವಾದ ಬೆಳಗೋಡು ಹೋಬಳಿಯಲ್ಲಿ ಅರೇಬಿಕಾ ತೋಟಗಳ ಸಂಖ್ಯೆ ಅಧಿಕ. ಭತ್ತ ಹಾಗು ಕಾಳು ಮೆಣಸನ್ನು ಇಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತದೆ. ಆದರೆ, ಈ ಬಾರಿ ತಾಲ್ಲೂಕುವಾರು ಮಳೆ ಕೊರತೆ ಶೇ.10 ರಷ್ಟಾದರೆ ಹೋಬಳಿಯಲ್ಲಿ ಶೇ. 45ರಷ್ಟು ಕೊರತೆ ಇದೆ. ಅರೇಬಿಕಾ ಕಾಫಿ ತೋಟಗಳನ್ನು ಉಳಿಸಿಕೊಳ್ಳುವ ಬಗ್ಗೆ ಬೆಳೆಗಾರರು ಚಿಂತಿತರಾಗಿದ್ದು, ಈಗಾಗಲೇ ಶೇ.40 ರಷ್ಟು ಅರೇಬಿಕಾ ಕಾಫಿ ಗಿಡಗಳು ಕಾಂಡ ಕೊರಕ ದಾಳಿಗೆ ತುತ್ತಾಗಿವೆ. ಮುಂದಿನ ಹಂಗಾಮಿನ ವೇಳೆಗೆ ಅದರ ಪ್ರಮಾಣ ಶೇ.60 ರಷ್ಟಾಗಲಿದೆ ಎಂಬುದು ತಜ್ಞರ ಮಾತು.

**ಭತ್ತದ ವ್ಯಾಪ್ತಿ ಗಣನೀಯ ಇಳಿಕೆ**

ಸಕಲೇಶಪುರ ತಾಲ್ಲೂಕಿನಲ್ಲಿ 14 ಸಾವಿರ ಹೆಕ್ಟೇರ್ ಭತ್ತ ಬೆಳೆಯುವ ಪ್ರದೇಶವಿದ್ದರೂ ಕಳೆದ ಸಾಲಿನಲ್ಲಿ 5000 ಹೆ. ಪ್ರದೇಶದಲ್ಲಿ ಭತ್ತ ಬೆಳೆಯಲಾಗಿತ್ತು. ಪ್ರಸಕ್ತ ವರ್ಷ ಕೃಷಿ ಇಲಾಖೆ 4500 ರಿಂದ 5000 ಹೆ. ಪ್ರದೇಶದಲ್ಲಿ ಭತ್ತ ಬೆಳೆಯಲಾಗುವುದೆಂದು ಮಾರ್ಚ್‌ನಲ್ಲಿ ವರದಿ ನೀಡಿತ್ತು. ಆದರೆ, ಆಗಸ್ಟ್ ಆರಂಭದಲ್ಲಿ ಮಳೆ ಕೊರತೆ ಹಾಗು ಹಲವು ಕಾರಣದಿಂದ 2500 ಹೆ. ಪ್ರದೇಶ ದಲ್ಲಿ ಭತ್ತ ನಾಟಿ ಮಾಡಲಾಗಿದೆ. ನಾಟಿ ಮಾಡಿರುವ ಭತ್ತದ ಬೆಳೆಗೆ ನೀರಿನ ಕೊರತೆ ಕಾಣಿಸಿಕೊಂಡಿದ್ದು, ಸುಮಾರು 470 ಹೆ. ನಾಟಿ ಮಾಡಿದ್ದ ಭತ್ತದ ಗದ್ದೆ ಗಳು ನೀರಿನ ಕೊರತೆಯಿಂದ ಒಣಗಿರುವ ಪರಿಣಾಮ ಕೃಷಿಕರು ಕಂಗಲಾಗಿದ್ದಾರೆ.

## ಜಿಲ್ಲೆಯಲ್ಲಿ 500 ಕೋ.ರೂ.ಗೂ ಹೆಚ್ಚಿನ ಆರ್ಥಿಕ ನಷ್ಟ | ತೆಂಗು ಬೆಳೆಗಾರರು ಕಂಗಾಲು

# 84 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ಬೆಳೆಗೆ ಬರದ ಬರೆ

**-ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ಬರದ ಪರಿಣಾಮ ಜಿಲ್ಲೆಯೊಂದರಲ್ಲೇ 84 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ಬೆಳೆ ಹಾನಿಗೊಳಗಾಗಿದ್ದು, ಸಾವಿರಾರು ತೆಂಗು ಬೆಳೆಗಾರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ.

ರಾಜ್ಯದ 50 ತಾಲ್ಲೂಕುಗಳಲ್ಲಿ ನಡೆಸಿರುವ ಸಮೀಕ್ಷೆಯ ಪ್ರಕಾರ ಒಟ್ಟು 84,567 ಹೆಕ್ಟೇರ್ ಪ್ರದೇಶದಲ್ಲಿನ ತೆಂಗಿನ ಮರಗಳು ಹಾನಿಗೊಳಗಾಗಿದ್ದು, ಸುಮಾರು 592.59 ಕೋ. ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಆ ಪೈಕಿ ಜಿಲ್ಲೆಯಲ್ಲೇ 84 ಸಾವಿರ ಹೆಕ್ಟೇರ್ ಪ್ರದೇಶದ ತೆಂಗಿನ ಬೆಳೆ ಹಾನಿಯಾಗಿರುವುದು ಜಿಲ್ಲೆಯ ತೆಂಗು ಬೆಳೆಗಾರರನ್ನು ಕಂಗಾಲಾಗಿಸಿದೆ.

ಜಿಲ್ಲೆಯಲ್ಲಿ ಒಟ್ಟು 1.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಅರಸೀಕೆರೆ ತಾಲ್ಲೂಕಿನಲ್ಲಿ 56,475 ಹೆಕ್ಟೇರ್, ಚನ್ನರಾಯಪಟ್ಟಣ 40,718, ಹಾಸನ 10,722, ಹೊಳೆನರಸೀಪುರ 9,281, ಬೇಲೂರು 4,034 ಹಾಗು ಅರಕಲಗೂಡು 2,987 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಈ ಪ್ರದೇಶಗಳಲ್ಲಿನ ಸಾವಿರಾರು ಕುಟುಂಬಗಳ ಜೀವನೋಪಾಯ ತೆಂಗಿನ ಬೆಳೆಯನ್ನೇ ಅವಲಂಬಿಸಿದೆ. ಹೀಗಾಗಿ ಮರಗಳ ಹಾನಿ ರೈತರ ಕೃಷಿ ಆದಾಯದ ಮೇಲೆ ಹೊಡೆತ ಬಿದ್ದಿದೆ.



ದೀರ್ಘಾವಧಿ ಬೆಳೆಯಾಗಿರುವ ತೆಂಗಿಗೆ ಈ ಬಾರಿಯ ಬರದ ಹೊಡೆತ ಮುಂದಿನ ಮೂರು ವರ್ಷಗಳವರೆಗೂ ಮುಂದುವರಿಯುವ ಸಾಧ್ಯತೆ ಇದೆ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ. ಹಲವು ವರ್ಷಗಳ ಪರಿಶ್ರಮದಿಂದ ಬೆಳೆಸಿದ ತೆಂಗಿನ ತೋಟಗಳು ಒಂದೆಡೆ ಮಳೆ ಕೊರತೆಯಿಂದ ಒಣಗುತ್ತಿದ್ದರೆ, ಮತ್ತೊಂದೆಡೆ ರೋಗ ಮತ್ತು ಕೀಟ ಬಾಧೆ ರೈತರ ಆತಂಕವನ್ನು ಹೆಚ್ಚಿಸಿದೆ.

ಬರದ ಜೊತೆಗೆ ಕಳೆದ ಮೂರ್ನಾಲ್ಕು ವರ್ಷಗಳಿಂದ ತೆಂಗಿನ ಮರಗಳಿಗೆ ವಿವಿಧ ರೀತಿಯ ರೋಗ ಹಾಗು ಕೀಟಬಾಧೆ ಹೆಚ್ಚಾಗಿದೆ. ಜಿಲ್ಲೆಯ ಹಲವು ಭಾಗಗಳಲ್ಲಿ ಶೇ.40 ರಿಂದ 50 ರಷ್ಟು ತೆಂಗಿನ ಮರಗಳಿಗೆ ರೋಗಬಾಧೆ ಉಂಟಾಗಿದೆ. ಕಪ್ಪುತಲೆ ಹುಳ, ಬಿಳಿನೊಣ ಸೇರಿ ವಿವಿಧ ಕೀಟಗಳ ಬಾಧೆಯಿಂದ ಮರಗಳ ಆರೋಗ್ಯ ಹದಗೆಡುತ್ತಿದ್ದು, ಇಳುವರಿಯೂ ಕಡಿಮೆಯಾಗುತ್ತಿದೆ. ಸಮರ್ಪಕವಾಗಿ ತೋಟ ನಿರ್ವಹಣೆ ಮಾಡದ ಪ್ರದೇಶಗಳಲ್ಲಿ ರೋಗಬಾಧೆ ಹೆಚ್ಚಾಗಿ ಕಂಡು ಬರುತ್ತಿದೆ. ಔಷಧಿ ಸಿಂಪಡಣೆ ಸೇರಿ ಹಲವು ಕ್ರಮಗಳನ್ನು ಕೈಗೊಂಡರೂ ನಿರೀಕ್ಷಿತ ಪ್ರಮಾಣದಲ್ಲಿ ರೋಗ ನಿಯಂತ್ರಣಕ್ಕೆ ಬರುತ್ತಿಲ್ಲ. ಹಲವು ವರ್ಷಗಳ ಕಾಲ ಕಷ್ಟಪಟ್ಟು ಬೆಳೆಸಿದ ಮರ ಒಣಗಿದರೆ

» ನಾಲ್ಕನೇ ಪುಟದಲ್ಲಿ

> **"ಜಿಲ್ಲೆಯಲ್ಲಿ 84 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ಬೆಳೆ ಹಾನಿಯಾಗಿದೆ ಎಂದು ವರದಿ ಸಲ್ಲಿಕೆ ಮಾಡಿದ್ದೇವೆ. ಸರ್ಕಾರ ಈ ಬಗ್ಗೆ ಪರಿಶೀಲಿಸಲಿದೆ. ಜೊತೆಗೆ ಕೇಂದ್ರದ ಬರದ ಅಧ್ಯಯನ ತಂಡ ಪರಿಶೀಲನೆ ನಡೆಸಿ ಮಾರ್ಗಸೂಚಿ ಅನ್ವಯ ನಷ್ಟಕೊಳ್ಳಗಾದ ರೈತರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಿದೆ.**
> **-ಯೋಗೇಶ್, ಉಪನಿರ್ದೇಶಕ, ತೋಟಗಾರಿಕೆ ಇಲಾಖೆ**

**ಇಳುವರಿ ಕುಸಿತ, ಬೆಲೆ ಏರಿಕೆ**

**ಬರ ಹಾಗು ರೋಗ ಬಾಧೆಯಿಂದ ತೆಂಗಿನ ಮರಗಳ ಬೆಳವಣಿಗೆ ಕುಂಠಿತಗೊಂಡು, ಕಾಯಿಗಳ ಸಂಖ್ಯೆ ಹಾಗು ಗಾತ್ರದಲ್ಲೂ ಇಳಿಕೆಯಾಗುತ್ತಿದೆ. ಈ ಹಿಂದೆ 80ರಿಂದ 100 ಕಾಯಿಗಳು ಸಿಗುತ್ತಿದ್ದ ಮರಗಳಲ್ಲಿ, ಇದೀಗ 30ರಿಂದ 40 ಕಾಯಿಗಳಿಗೆ ಇಳಿಕೆಯಾಗಿದೆ. ಇಳುವರಿ ಕುಸಿದಿರುವ ಬೆನ್ನಲ್ಲೇ ಎಳನೀರು, ತೆಂಗಿನಕಾಯಿ ಬೆಲೆ ಏರಿಕೆಯಾಗಿದೆ. ಎಳನೀರಿನ ದರ ಒಂದಕ್ಕೆ 80ರೂ.ಗೆ ತಲುಪಿದೆ. ಮುಂದಿನ ದಿನಗಳಲ್ಲಿ 100ಕ್ಕೆ ಏರಿದರೂ ಅಚ್ಚರಿಯಿಲ್ಲ. ತೆಂಗಿನ ಕಾಯಿ ದರವೂ ಹೆಚ್ಚಾಗಿದೆ.**

# ಪೌರ ಪ್ರಜ್ಞೆ: ಸುಧಾರಿತ ಸಮಾಜದ ನಿಜವಾದ ಕನ್ನಡಿ

**ಪ್ರತಿ ವಿಷಯದಲ್ಲೂ ನೂರಾರು, ಸಾವಿರಾರು ಕಾನೂನಾತ್ಮಕ ನೀತಿ, ನಿರೂಪಣೆಗಳಿವೆ. ಸರಿ ತಪ್ಪುಗಳ ಬಗ್ಗೆ ಕಲ್ಪನೆ ಇದೆ. ಆದರೂ ನಮ್ಮಲ್ಲಿ ನಾಗರಿಕ ಪ್ರಜ್ಞೆ ಮಾತ್ರ ಶೂನ್ಯಕ್ಕೆ ಸಮ. ಬೇಕಿದ್ದರೆ ಒಂದು ಸುತ್ತ ಹೊರಗಡೆ ಹೋಗಿ ಬನ್ನಿ. ರಸ್ತೆಯಲ್ಲಿ ಕಸ ಎಸೆಯುವುದು, ಸಂಚಾರಿ ನಿಯಮ ಉಲ್ಲಂಘನೆ ಮಾಡುವುದು, ಪಾದಚಾರಿ ಮಾರ್ಗದಲ್ಲೂ ವಾಹನಗಳನ್ನು ಚಲಾಯಿಸುವುದು, ಬಸ್‌ಗಳ ಸೀಟುಗಳನ್ನು ಹರಿಯುವುದು, ಗೋಡೆಗಳ ಮೇಲೆ ಕರಪತ್ರಗಳನ್ನು ಅಂಟಿಸುವುದು, ರೈಲಿನ ಅಡುಗೆ ಮಾಡುವುದು, ಚಲಿಸುತ್ತಿರುವ ರೈಲಿನ ಗಾಜು ಒಡೆಯುವುದು, ಎಂದರಲ್ಲಿ ಉಗುಳುವುದು, ಮಲ ಮೂತ್ರವಿಸರ್ಜನೆ ಮಾಡುವುದು ಹೀಗೆ ನಾಗರಿಕ ಸಮಾಜದಲ್ಲಿ ಸಾಕಷ್ಟು ಅನಾಗರಿಕ ವರ್ತನೆಯ ನಿದರ್ಶಗಳು ಕಾಣಸಿಗುತ್ತವೆ.**




ಸ್ವಚ್ಛ ಸಮಾಜ
– ಸುರೇಂದ್ರ ಪೈ, ಭಟ್ಕಳ

ಇತ್ತೀಚಿಗೆ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನನ್ನ ಕನಸಿನ ಭಾರತ ಎಂಬ ವಿಷಯದ ಕುರಿತು ಮಾತನಾಡುತ್ತಾ ಒಬ್ಬ ವಿದ್ಯಾರ್ಥಿ ನಮ್ಮ ದೇಶವು ಇನ್ನೂ ತನಕವು ಅಭಿವೃದ್ಧಿ ಶೀಲ ರಾಷ್ಟ್ರವಾಗದೇ, ಅಭಿವೃದ್ಧಿ ಪಥದ ಸಾಗುತ್ತಿರುವ ರಾಷ್ಟ್ರವಾಗಿಯೇ ಉಳಿಯಲು ಬಹು ಮುಖ್ಯ ಕಾರಣ ನಮ್ಮ ಜನರಲ್ಲಿ ನಾಗರಿಕ ಪ್ರಜ್ಞೆ ಅಂದರೆ ಸಿವಿಕ್ ಸೆನ್ಸ್ ಇನ್ನೂ ಜಾಗೃತವಾಗಿಲ್ಲದಿರುವಿಕೆ ಎಂಬ ಅಭಿಪ್ರಾಯ ಹಂಚಿಕೊಂಡನು.

ವಿದ್ಯಾರ್ಥಿಯ ಮಾತು ಕೇಳಿ ಬಹಳ ಆಶ್ಚರ್ಯವು, ಸಂತೋಷವು ಆಯಿತು. ಬಳಿಕ ಆ ವಿದ್ಯಾರ್ಥಿಯ ಬಳಿ ಸಿವಿಕ್ ಸೆನ್ಸ್ ಬಗ್ಗೆ ಯಾರು ಹೇಳಿಕೊಟ್ಟರು, ಏನಾಯಿತು ಎಂದು ಕೇಳಿದೆ. ಸರ್, ಪುರಸಭೆಯವರು ನಿತ್ಯ ಬೆಳಿಗ್ಗೆ ಎಲ್ಲರ ಮನೆಯ ಮುಂದೆ ಕಸದ ಗಾಡಿ ಕಳುಹಿಸುತ್ತಾರೆ. ಕಸ ವಿಂಗಡನೆಯ ಬಗ್ಗೆ ಮಾಹಿತಿ ಇದ್ದರೂ ಬಹಳಷ್ಟು ವಿದ್ಯಾವಂತರೇ ಅನಾಗರಿಕರಂತೆ ವರ್ತಿಸಿ ವಾದಕ್ಕೆ ಇಳಿಯುತ್ತಾರೆ. ಎಲ್ಲಾ ಕಸವನ್ನು ಒಂದರಲ್ಲೇ ತುಂಬಿಸುತ್ತಾರೆ. ನಮ್ಮ ಅಪ್ಪ ಒಬ್ಬ ಪೌರ ಕಾರ್ಮಿಕ, ನಿತ್ಯವೂ ಜನರ ಈ ವರ್ತನೆಯನ್ನು ಕಂಡು ನಮ್ಮ ಜನರಿಗೆ ನಾಗರಿಕ ಪ್ರಜ್ಞೆಯೇ ಇಲ್ಲ ಎಂದು ಬೇಸರ ಮಾಡಿಕೊಳ್ಳುತ್ತಾರೆ ಎಂದನು.

ಅಷ್ಟಕ್ಕೇ ಸುಮ್ಮನಾಗದೇ ಅದೇ ನೋಡಿ ಸರ್ ಇತ್ತೀಚೆಗೆ ಫಿಫಾ ವಿಶ್ವಕಪ್‌ನಲ್ಲಿ ಜಪಾನ್ ತಂಡ ಸೋತರು ಸಹ ಆ ದೇಶದ ಜನ ಪಂದ್ಯ ಮುಗಿದ ಬಳಿಕ, ಇಡೀ ಸ್ಟೇಡಿಯಂ ಅನ್ನು ಸ್ವಚ್ಛಗೊಳಿಸಿದರು. ಹಾಗಾಗಿ ನನ್ನ ಕನಸಿನ ಭಾರತದಲ್ಲಿ ಜನರಲ್ಲಿ ಸ್ವಯಂ ಪ್ರೇರಿತವಾಗಿ ನಾಗರಿಕ ಪ್ರಜ್ಞೆ ಮೂಡಬೇಕು ಅದುವೇ ನನ್ನ ಕನಸು ಎಂದನು. ಹೌದಲ್ಲವೇ, ಆ ವಿದ್ಯಾರ್ಥಿ ಹೇಳಿದ್ದು? ನಮ್ಮದು ವಿಶ್ವದ ಅತಿದೊಡ್ಡ ಸಂವಿಧಾನ ಹೊಂದಿರುವ ದೇಶ.

ಪ್ರತಿ ವಿಷಯದಲ್ಲೂ ನೂರಾರು, ಸಾವಿರಾರು ಕಾನೂನಾತ್ಮಕ ನೀತಿ, ನಿರೂಪಣೆಗಳಿವೆ. ಸರಿ ತಪ್ಪುಗಳ ಬಗ್ಗೆ ಕಲ್ಪನೆ ಇದೆ. ಆದರೂ ನಮ್ಮಲ್ಲಿ ನಾಗರಿಕ ಪ್ರಜ್ಞೆ ಮಾತ್ರ ಶೂನ್ಯಕ್ಕೆ ಸಮ. ಬೇಕಿದ್ದರೆ ಒಂದು ಸುತ್ತ ಹೊರಗಡೆ ಹೋಗಿ ಬನ್ನಿ. ರಸ್ತೆಯಲ್ಲಿ ಕಸ ಎಸೆಯುವುದು, ಸಂಚಾರಿ ನಿಯಮ ಉಲ್ಲಂಘನೆ ಮಾಡುವುದು, ಪಾದಚಾರಿ ಮಾರ್ಗದಲ್ಲೂ ವಾಹನಗಳನ್ನು ಚಲಾಯಿಸುವುದು, ಬಸ್‌ಗಳ ಸೀಟುಗಳನ್ನು ಹರಿಯುವುದು, ಗೋಡೆಗಳ ಮೇಲೆ ಕರಪತ್ರಗಳನ್ನು ಅಂಟಿಸುವುದು, ರೈಲಿನ ಅಡುಗೆ ಮಾಡುವುದು, ಚಲಿಸುತ್ತಿರುವ ರೈಲಿನ ಗಾಜು ಒಡೆಯುವುದು, ಎಂದರಲ್ಲಿ ಉಗುಳುವುದು, ಮಲ ಮೂತ್ರವಿಸರ್ಜನೆ ಮಾಡುವುದು ಹೀಗೆ ನಾಗರಿಕ ಸಮಾಜದಲ್ಲಿ ಸಾಕಷ್ಟು ಅನಾಗರಿಕ ವರ್ತನೆಯ ನಿದರ್ಶಗಳು ಕಾಣಸಿಗುತ್ತವೆ.

ಈ ಸಿವಿಕ್ ಸೆನ್ಸ್ ಎಂಬುದು ಸಾರ್ವಜನಿಕ ಸ್ವತ್ತಿಗೆ ಮಾತ್ರ ಸೀಮಿತವಲ್ಲ, ಇದು ನಾಗರಿಕ ಸಮಾಜಕ್ಕೆ ಅನ್ವಯಿಸುವ ವಿಷಯ. ಸರಳವಾಗಿ ಹೇಳುವುದಾದರೆ ಸಿವಿಕ್ ಸೆನ್ಸ್ ಎಂಬುದು ಸಾರ್ವಜನಿಕ ಸ್ಥಳಗಳಲ್ಲಿ ನಡೆದುಕೊಳ್ಳುವ ಸಾಮಾನ್ಯ ಪ್ರಜ್ಞೆ, ಜವಾಬ್ದಾರಿ ಮತ್ತು ಶಿಸ್ತು. ನಾವು ನಮ್ಮ ಮನೆಯನ್ನು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುತ್ತೇವೆಯೋ, ಅದೇ ಕಾಳಜಿಯನ್ನು ನಮ್ಮ ಊರು, ರಸ್ತೆ, ಸಾರ್ವಜನಿಕ ಆಸ್ತಿ ಮತ್ತು ಇತರ ನಾಗರಿಕರ ಹಕ್ಕುಗಳ ಮೇಲೂ ತೋರುವುದೇ ನಿಜವಾದ ಸಿವಿಕ್ ಸೆನ್ಸ್.

ಇದು ಕೇವಲ ಕಾನೂನುಗಳನ್ನು ಪಾಲಿಸುವುದಷ್ಟೇ ಅಲ್ಲ, ಬದಲಿಗೆ ನಮ್ಮಿಂದ ಮತ್ತೊಬ್ಬರಿಗೆ ಯಾವುದೇ ತೊಂದರೆಯಾಗಬಾರದು ಎಂಬ ವಿವೇಚನೆ. ನಮ್ಮಲ್ಲಿ ಒಳ್ಳೆಯ ಸಂಸ್ಕೃತಿ ಮತ್ತು ಮೌಲ್ಯಗಳಿದ್ದರೂ, ಸಾರ್ವಜನಿಕ ಜೀವನದಲ್ಲಿ ಶಿಸ್ತು ಕಡಿಮೆ ಇರಲು ಪ್ರಮುಖ ಕಾರಣ ನಾನು, ನಮ್ಮದು ಎಂಬ ಸಂಕುಚಿತ ಹಿತಾಸಕ್ತಿ.

ನಾಗರಿಕ ಪ್ರಜ್ಞೆ ಎಂದ ಕೂಡಲೇ ನೆನಪಿಗೆ ಬರುವ ಮೊದಲ ದೇಶ ಜಪಾನ್. ಇಲ್ಲಿನ ಜನರ ಶಿಸ್ತು ಜಗತ್ಪ್ರಸಿದ್ಧ. ಜಪಾನ್‌ನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಸದ ಬುಟ್ಟಿಗಳೇ ಇಲ್ಲವಂತೆ. ಆದರೂ ಜನ ತಮ್ಮ ಕಸವನ್ನು ತಮ್ಮೊಂದಿಗೆ ಕೊಂಡೊಯ್ದು ಮನೆಯ ವಿಲೇವಾರಿ ಮಾಡುತ್ತಾರೆ ಹೊರತು ಎಂದರಲ್ಲಿ ಎಸೆಯುವುದಿಲ್ಲ.

ನೀವು ಯಾವುದೋ ಒಂದು ವಿಳಾಸ ಹುಡುಕುತ್ತಾ ದಾರಿ ತಪ್ಪಿ, ಸರಿಯಾದ ವಿಳಾಸವನ್ನು ಅಲ್ಲಿಯ ಜನರ ಬಳಿ ಕೇಳಿದರೆ ಅವರು ನಿಮ್ಮೊಂದಿಗೆ ನಾಲ್ಕು ಹೆಜ್ಜೆ ನಡೆದು ನೀವು ಹೋಗಬೇಕಾದ ದಾರಿಯನ್ನು ತೋರಿಸುತ್ತಾರೆ. ನಿಗದಿತ ಸಮಯಕ್ಕೆ ರೈಲು ತಲುಪದಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳಲಾಗುತ್ತದೆ. ಅಲ್ಲಿ ಮಕ್ಕಳಿಗೆ ಪ್ರೌಢಶಾಲೆಯ ಹಂತ ತಲುಪುವವರೆಗೆ ಯಾವುದೇ ಕಠಿಣ ಪರೀಕ್ಷೆ ಗಳಿಲ್ಲ, ಬದಲಿಗೆ ನಡವಳಿಕೆ, ನೈತಿಕತೆ ಮತ್ತು ಸ್ವಚ್ಛತೆಯನ್ನು ಪ್ರಮುಖ ಪಾಠವಾಗಿ ಕಲಿಸಲಾಗುತ್ತದೆ.

ಶಾಲೆಗಳಲ್ಲಿ ಮಕ್ಕಳೇ ತಮ್ಮ ತರಗತಿಗಳನ್ನು ಮತ್ತು ಶೌಚಾಲಯಗಳನ್ನು ಗುಡಿಸಿ ಸ್ವಚ್ಛಗೊಳಿಸುತ್ತಾರೆ. ಅದುವೇ ಇಂದಿನ ಭಾರತದಲ್ಲಿ ಏನಾದರೂ ಮಕ್ಕಳಿಂದ ಶಾಲೆಯಲ್ಲಿ ವೈಯಕ್ತಿಕ ಸ್ವಚ್ಛತೆ ಕಲಿಸಲು ಇಂತಹ ಕ್ರಮ ಕೈಗೊಂಡರೆ ಶಾಲೆಯ ಮುಖ್ಯೋಪಾಧ್ಯಾಯರು ಜೈಲಿಗೆ ಸೇರಿರುತ್ತಾರೆ. ಸುದ್ದಿ ಮಾಧ್ಯಮಗಳಲ್ಲಿ ಬ್ರೇಕಿಂಗ್ ನ್ಯೂಸ್ ಆಗುತ್ತಾರೆ.

ಜಪಾನ್ ಮತ್ರವಲ್ಲ, ಸಿಂಗಾಪುರ, ಸ್ವಿಟ್ಜರ್ ಲ್ಯಾಂಡ್ ಮತ್ತು ನಾರ್ಡಿಕ್ ದೇಶಗಳು (ನಾರ್ವೆ, ಡೆನ್ಮಾರ್ಕ್, ಫಿನ್‌ಲ್ಯಾಂಡ್) ಇಂತಹ ನಾಗರಿಕ ಪ್ರಜ್ಞೆ ಹಾಗೂ ಕಟ್ಟುನಿಟ್ಟಿನ ಕಾನೂನು ಪಾಲನೆಯ ಮೂಲಕ ಅತಿ ಕಡಿಮೆ ಸಮಯದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾಗಿವೆ. ನಾಗರಿಕ ಪ್ರಜ್ಞೆ ಎನ್ನುವುದು ಕೇವಲ ನಿಯಮಗಳ ಕಟ್ಟುಪಾಡಲ್ಲ, ಅದು ವ್ಯಕ್ತಿಯ ಒಳಮನಸ್ಸಿನಿಂದ ಬರಬೇಕಾದ ಜವಾಬ್ದಾರಿ.

ನಮ್ಮ ಸಮಾಜದಲ್ಲಿ ಸಿವಿಕ್ ಸೆನ್ಸ್ ಕೊರತೆ ಇದೆ ಎಂದು ಕೊರಗುವುದಕ್ಕಿಂತ, ಅದನ್ನು ಹೇಗೆ ಬೆಳೆಸಿಕೊಳ್ಳ ಬಹುದು ಎಂಬುದರ ಬಗ್ಗೆ ಯೋಚಿಸುವುದು ಹೆಚ್ಚು ಮುಖ್ಯ. ಬಾಲ್ಯದಿಂದಲೇ ಮೌಲ್ಯಾಧಾರಿತ ಶಿಕ್ಷಣಕ್ಕೆ ಆದ್ಯತೆ ದೊರಕಬೇಕು. ಶಾಲೆಗಳಲ್ಲಿ ಕೇವಲ ಪುಸ್ತಕದ ಪಾಠಗಳಲ್ಲದೆ, ಕಸ ವಿಲೇವಾರಿ ಮಾಡುವುದು ಹೇಗೆ, ಸಾರ್ವಜನಿಕ ಆಸ್ತಿಯನ್ನು ಹೇಗೆ ಕಾಪಾಡಬೇಕು ಮತ್ತು ಇತರರನ್ನು ಹೇಗೆ ಗೌರವಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಕಲಿಸಬೇಕು. ಮಕ್ಕಳು ದೊಡ್ಡವರು ಹೇಳಿದ್ದನ್ನು ಕೇಳುವುದಕ್ಕಿಂತ, ಅವರು ಮಾಡುವುದನ್ನು ನೋಡಿ ಕಲಿಯುತ್ತಾರೆ. ಪೋಷಕರು ಮತ್ತು ಶಿಕ್ಷಕರು ಮೊದಲು ತಾವೇ ಸಿವಿಕ್ ಸೆನ್ಸ್ ಪಾಲಿಸುವ ಮೂಲಕ ಮಕ್ಕಳಿಗೆ ಜೀವಂತ ಮಾದರಿಯಾಗಬೇಕು.

ಇನ್ನೂ ಬೆರಳೆಣಿಕೆಯಷ್ಟು ಜನರಿಗೆ ಸ್ವಯಂಪ್ರೇರಣೆ ಇದ್ದರೂ, ಬಹುಪಾಲು ಜನರಿಗೆ ಕಾನೂನಿನ ಭಯವಿದ್ದರೆ ಮಾತ್ರ ಶಿಸ್ತು ಬರುತ್ತದೆ. ನಮ್ಮಲ್ಲಿ ಕಾನೂನು ಪಾಲನೆಯ ನಿಷ್ಪಕ್ಷಪಾತವಾಗಿ ಅನುಷ್ಠಾನ ಗೊಳ್ಳಬೇಕು. ರಾಜಕಾರಣಿಗಳು ಅಥವಾ ಶ್ರೀಮಂತರು ಎನ್ನುವ ಕಾರಣಕ್ಕೆ ಯಾರಿಗೂ ವಿನಾಯಿತಿ ಸಿಗಬಾರದು. ಮೂಲಭೂತ ಸೌಕರ್ಯಗಳ ಸುಧಾರಣೆಯಾಗಬೇಕು.

ಜನರಲ್ಲಿ ಶಿಸ್ತು ಇರಬೇಕಾದರೆ, ಸರ್ಕಾರವೂ ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕು. ಪ್ರತಿ ರಸ್ತೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಕಸದ ಬುಟ್ಟಿಗಳು, ಸುಲಭವಾಗಿ ಸಿಗುವ ಸಾರ್ವಜನಿಕ ಶೌಚಾಲಯಗಳು ಮತ್ತು ವ್ಯವಸ್ಥಿತ ಕಸ ವಿಲೇವಾರಿ ಘಟಕಗಳು ಇರಬೇಕು. ಸೌಲಭ್ಯಗಳೇ ಇಲ್ಲದ ಕಡೆ ಜನರಿಂದ ಸಂಪೂರ್ಣ ಶಿಸ್ತು ನಿರೀಕ್ಷಿಸುವುದು ಕಷ್ಟ.

ದೃಶ್ಯ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳು ಜನಸಾಮಾನ್ಯರ ಮೇಲೆ ಅಗಾಧವಾದ ಪ್ರಭಾವ ಬೀರುತ್ತವೆ. ಟಿವಿ ಮತ್ತು ಮೊಬೈಲ್‌ಗಳಲ್ಲಿ ಬರುವ ಸಣ್ಣಪುಟ್ಟ ಜಾಹೀರಾತುಗಳು ಅಥವಾ ಕಿರುಚಿತ್ರಗಳು ಸಿವಿಕ್ ಸೆನ್ಸ್ ಮಹತ್ವವನ್ನು ಹಾಸ್ಯದ ಮೂಲಕ ಅಥವಾ ಗಂಭೀರವಾಗಿ ಮನವರಿಕೆ ಮಾಡಿಕೊಡುವಂತಿರಬೇಕು.

ತಪ್ಪು ಮಾಡಿದವರನ್ನು ಸಾರ್ವಜನಿಕವಾಗಿ ವಿಮರ್ಶಿಸುವುದರ ಜೊತೆಗೆ, ಸಣ್ಣದೊಂದು ಒಳ್ಳೆಯ ಕೆಲಸ ಮಾಡಿದವರನ್ನು (ಉದಾಹರಣೆಗೆ: ರಸ್ತೆ ಬದಿ ಬಿದ್ದ ಕಸವನ್ನು ತೆಗೆದು ಕಸದ ಬುಟ್ಟಿಗೆ ಹಾಕುವವರು) ಮೆಚ್ಚಿ ಪ್ರೋತ್ಸಾಹಿಸುವ ಸಂಸ್ಕೃತಿ ಬೆಳೆಯಬೇಕು. ಬದಲಾವಣೆ ಬೇರೆಯವರಿಂದ ಆರಂಭವಾಗಲಿ ಎಂದು ಕಾಯದೆ, ನಾವೇ ಮೊದಲ ಹೆಜ್ಜೆ ಇಡಬೇಕು. ನಾಗರಿಕ ಪ್ರಜ್ಞೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಒಂದಕ್ಕೊಂದು ಸಂಬಂಧ ಹೊಂದಿದೆ ಎಂದು ಬಹುತೇಕ ಜನರಿಗೆ ತಿಳಿದಿಲ್ಲ.

ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಕಾಪಾಡುವುದು ರಾಷ್ಟ್ರೀಯ ಸಂಪತ್ತನ್ನು ಉಳಿಸುವುದಕ್ಕೆ ಸಮ. ಬಸ್ ಸೀಟುಗಳನ್ನು ಹರಿಯುವುದು, ಸರ್ಕಾರದ ಆಸ್ತಿಗಳನ್ನು ಹಾನಿ ಮಾಡುವುದರಿಂದ ಸರ್ಕಾರದ ಕೋಟ್ಯಂತರ ರೂಪಾಯಿ ತೆರಿಗೆ ಹಣ ವ್ಯರ್ಥವಾಗುತ್ತದೆ. ನಾಗರಿಕ ಪ್ರ ಹೆಚ್ಚಿದಾಗ ಈ ರೀತಿಯ ಹಾನಿ ತಪ್ಪುತ್ತದೆ. ಆಗ ಸರ್ಕಾರಿ ಹಣವು ವಿನಾಶದ ದುರಸ್ತಿಗೆ ಬಳಕೆಯಾಗದೆ, ಶಿಕ್ಷಣ, ಆರೋಗ್ಯ ಮತ್ತು ಬಡವರ ಕಲ್ಯಾಣದಂತಹ ರಚನಾತ್ಮಕ ಅಭಿವೃದ್ಧಿ ಕಾರ್ಯಗಳಿಗೆ ನೇರವಾಗಿ ಬಳಕೆಯಾಗುತ್ತದೆ.

ಸಂಚಾರ ನಿಯಮಗಳನ್ನು ಪಾಲಿಸುವುದು, ಸಾಲಿನಲ್ಲಿ ನಿಲ್ಲುವ ಸಂಸ್ಕೃತಿ ಮತ್ತು ಕಚೇರಿಗಳಲ್ಲಿ ಶಿಸ್ತು ಕಾಪಾಡುವುದು ಸಮಾಜದ ದೈನಂದಿನ ಕಾರ್ಯಚಟುವಟಿಕೆಯನ್ನು ವೇಗಗೊಳಿಸುತ್ತದೆ. ರಸ್ತೆಯಲ್ಲಿ ಟ್ರಾಫಿಕ್ ನಿಯಮಗಳನ್ನು ಎಲ್ಲರೂ ಪಾಲಿಸಿದರೆ ಅನಗತ್ಯ ಜಾಮ್ ಉಂಟಾಗುವುದಿಲ್ಲ, ಇಂಧನ ಉಳಿಯುತ್ತದೆ ಮತ್ತು ಲಕ್ಷಾಂತರ ಜನರ ಅಮೂಲ್ಯ ಸಮಯ ವ್ಯರ್ಥವಾಗುವುದು ತಪ್ಪುತ್ತದೆ.

ಸಮಯದ ಉಳಿತಾಯ ಮತ್ತು ಉತ್ಪಾದಕತೆ ಹೆಚ್ಚಿದಂತೆ, ದೇಶದ ಆರ್ಥಿಕ ಚಕ್ರವು ಸರಾಗವಾಗಿ ಹಾಗೂ ವೇಗವಾಗಿ ತಿರುಗುತ್ತದೆ. ಯಾವುದೇ ದೇಶದ ಪ್ರಗತಿಗೆ ಪ್ರವಾಸೋದ್ಯಮ ಪ್ರಮುಖ ಆಧಾರಸ್ತಂಭ. ವಿದೇಶಿ ಪ್ರವಾಸಿಗರು ಅಥವಾ ಹೂಡಿಕೆದಾರರು ನಮ್ಮ ದೇಶಕ್ಕೆ ಬಂದಾಗ, ಇಲ್ಲಿನ ಸ್ವಚ್ಛತೆ, ರಸ್ತೆ ಶಿಸ್ತು ಮತ್ತು ಜನಸಾಮಾನ್ಯರ ಸಭ್ಯತೆಯನ್ನು ಗಮನಿಸುತ್ತಾರೆ.

ಸ್ವಚ್ಛ ಹಾಗೂ ಶಿಸ್ತುಬದ್ಧ ವಾತಾವರಣವಿದ್ದರೆ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಹೆಚ್ಚಾಗುತ್ತದೆ, ಪ್ರವಾಸೋದ್ಯಮ ಬೆಳೆಯುತ್ತದೆ ಮತ್ತು ಜಾಗತಿಕ ವೇದಿಕೆಯಲ್ಲಿ ನಮ್ಮ ದೇಶದ ಮೇಲಿನ ಗೌರವ ಇಮ್ಮಡಿಯಾಗುತ್ತದೆ. ಕಸವನ್ನು ಎಂದರಲ್ಲಿ ಎಸೆಯದೆ, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದು ನೇರವಾಗಿ ಸಾರ್ವಜನಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ರೋಗಗಳು ಹರಡುವುದು ಕಡಿಮೆಯಾದಂತೆ, ನಾಗರಿಕರ ಆರೋಗ್ಯ ಸುಧಾರಿಸುತ್ತದೆ.

ಹೀಗೆ ನಮ್ಮ ಸಣ್ಣ ಸಣ್ಣ ಸಾರ್ವಜನಿಕ ಬದುಕಿನ ನಾಗರಿಕ ವರ್ತನೆಯು ಸಮಾಜದ, ದೇಶದ ಪ್ರಗತಿಗೆ ಕಾರಣವಾಗಬಲ್ಲದು. ಸಿವಿಕ್ ಸೆನ್ಸ್ ಎನ್ನುವುದು ಹುಟ್ಟಿನಿಂದ ಬರುವುದಿಲ್ಲ, ಅದು ನಮ್ಮ ಆಲೋಚನಾ ಕ್ರಮ ಮತ್ತು ಅಭ್ಯಾಸದಿಂದ ರೂಪುಗೊಳ್ಳುತ್ತದೆ. ಸರ್ಕಾರದ ಕಾನೂನುಗಳು ಮತ್ತು ಶಿಕ್ಷೆ, ದಂಡಗಳು ನಮ್ಮನ್ನು ತಾತ್ಕಾಲಿಕವಾಗಿ ತಡೆಯಬಹುದೇ ಹೊರತು, ನಮ್ಮ ಮನಸ್ಥಿತಿ ಬದಲಾಗದ ಹೊರತು ನಿಜವಾದ ಸುಧಾರಣೆ ಅಸಾಧ್ಯ.



---

**1912ರಲ್ಲಿ ಲಿಚ್ಟನ್‌ಸ್ಟೈನ್ ತನ್ನ ಮೊದಲ ಸ್ವತಂತ್ರ ಅಂಚೆಚೀಟಿಯನ್ನು ಬಿಡುಗಡೆ ಮಾಡಿತ್ತು. ಆದರೆ 1920 ಮತ್ತು 1930ರ ದಶಕಗಳಲ್ಲಿ ಈ ಕಲ್ಪನೆಯನ್ನು ಒಂದು ಪೂರ್ಣಪ್ರಮಾಣದ ರಾಷ್ಟ್ರೀಯ ಉದ್ಯಮವನ್ನಾಗಿ ಪರಿವರ್ತಿಸಲಾಯಿತು. ಆ ಕಾಲದಲ್ಲಿ ಜಗತ್ತಿನಾದ್ಯಂತ ಶ್ರೀಮಂತರು ಮತ್ತು ವಿದ್ಯಾವಂತರಲ್ಲಿ ಅಂಚೆಚೀಟಿಗಳನ್ನು ಸಂಗ್ರಹಿಸುವ ಹವ್ಯಾಸ ಅತ್ಯಂತ ಜನಪ್ರಿಯವಾಗಿತ್ತು.**

# ಈ ದೇಶಕ್ಕೆ ಅಂಚೆಚೀಟಿಯೇ ಆರ್ಥಿಕತೆ





ಸಂಪಾದಕೀಯ ಸದ್ಯಶೋಧನೆ ವಿಶ್ವದ ಆರ್ಥಿಕ ಭೂಪಟವನ್ನು ಗಮನಿಸಿದರೆ ಬಲಿಷ್ಠ ರಾಷ್ಟ್ರಗಳು ಬೃಹತ್ ಕೈಗಾರಿಕೆಗಳು, ಕಚ್ಚಾ ತೈಲ, ತಂತ್ರಜ್ಞಾನ ಅಥವಾ ಕೃಷಿ ಉತ್ಪನ್ನಗಳ ರಫ್ತಿನ ಮೂಲಕ ಅಗಾಧ ಸಂಪತ್ತನ್ನು ಗಳಿಸುವುದನ್ನು ನಾವು ಕಾಣುತ್ತೇವೆ. ಆದರೆ, ಯುರೋಪಿನ ಆಲ್ಪ್ಸ್ ಪರ್ವತ ಶ್ರೇಣಿಗಳ ಮಡಿಲಲ್ಲಿ ಅಡಗಿರುವ ಲಿಚ್ಟನ್ ಸ್ಟೈನ್ ಎಂಬ ಪುಟ್ಟ ರಾಜಪ್ರಭುತ್ವದ ದೇಶವು ತೀರಾ ಭಿನ್ನವಾದ ಹಾದಿಯನ್ನು ಹಿಡಿದಿದೆ.

ಕೇವಲ ಬೆರಳೆಣಿಕೆಯಷ್ಟು ಚದರ ಕಿಮೀ ವಿಸ್ತೀರ್ಣವಿರುವ ಈ ಪುಟ್ಟ ದೇಶವು, ಅಂಚೆಚೀಟಿಗಳ ವಿಶಿಷ್ಟ ವಿನ್ಯಾಸ ಮತ್ತು ರಫ್ತಿನ ಮೂಲಕವೇ ಜಾಗತಿಕವಾಗಿ ಅಪಾರ ಖ್ಯಾತಿಯನ್ನು ಹಾಗೂ ಗಣನೀಯ ಆದಾಯವನ್ನು ಗಳಿಸಿ ಇತಿಹಾಸ ನಿರ್ಮಿಸಿದೆ.

ಲಿಚ್ಟನ್‌ಸ್ಟೈನ್ ಪ್ರಪಂಚದ ಅತ್ಯಂತ ಚಿಕ್ಕ ಮತ್ತು ಅಪರೂಪದ ದೇಶಗಳಲ್ಲಿ ಒಂದಾಗಿದೆ. ಸ್ವಿಟ್ಜರ್ಲೆಂಡ್ ಮತ್ತು ಆಸ್ಟ್ರಿಯಾ ದೇಶಗಳ ನಡುವೆ ಸುತ್ತುವರಿದಿರುವ ಈ ದೇಶದ ಒಟ್ಟು ವಿಸ್ತೀರ್ಣ ಕೇವಲ 160 ಚದರ ಕಿಮೀ ಮಾತ್ರ ಮತ್ತು ಇದರ ಇಡೀ ಜನಸಂಖ್ಯೆ ಸುಮಾರು ನಲವತ್ತು ಸಾವಿರದ ಆಸುಪಾಸಿನಲ್ಲಿದೆ.

ಇದು ಜಗತ್ತಿನ ಕೇವಲ ಎರಡೇ ಎರಡು ಡಬಲ್ ಲ್ಯಾಂಡ್‌ಲಾಕ್ಡ್ (ನೆಲದಿಂದ ಆವೃತವಾದ ದೇಶಗಳಿಂದಲೇ ಸುತ್ತುವರಿದ ದೇಶ) ರಾಷ್ಟ್ರಗಳಲ್ಲಿ ಒಂದಾಗಿದೆ. ಇಂಥ ಸೀಮಿತ ಭೌಗೋಳಿಕತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ತೀವ್ರ ಕೊರತೆಯ ನಡುವೆಯೂ, ತನ್ನ ಸ್ವಂತ ಕಾಲ ಮೇಲೆ ನಿಲ್ಲಲು ಈ ದೇಶವು ಕಂಡುಕೊಂಡ ಅದ್ಭುತ ಸೃಜನಶೀಲ ಮಾರ್ಗವೇ ಕಲಾತ್ಮಕ ಅಂಚೆಚೀಟಿಗಳ ಉತ್ಪಾದನೆ. ಈ ಪುಟ್ಟ ದೇಶದ ಅಂಚೆಚೀಟಿಗಳ ಕಥೆ ಆರಂಭವಾಗುವುದು ಒಂದನೇ ಮಹಾ ಯುದ್ಧದ ನಂತರದ ಕಠಿಣ ದಿನಗಳಲ್ಲಿ.

1914ರ ಮಹಾಯುದ್ಧದ ಹೊಡೆತಕ್ಕೆ ಇಡೀ ಯುರೋಪ್ ತತ್ತರಿಸಿ ಹೋಗಿತ್ತು. ಆ ಸಮಯದಲ್ಲಿ ಲಿಚ್ಟನ್‌ಸ್ಟೈನ್ ಆರ್ಥಿಕವಾಗಿ ಆಸ್ಟ್ರಿಯಾ-ಹಂಗೇರಿ ಸಾಮ್ರಾಜ್ಯದೊಂದಿಗೆ ನಿಕಟ ನಂಟು ಹೊಂದಿತ್ತು. ಯುದ್ಧದ ನಂತರ ಆ ಸಾಮ್ರಾಜ್ಯ ಪತನಗೊಂಡಾಗ, ಲಿಚ್ಟನ್‌ಸ್ಟೈನ್ ತೀವ್ರ ಹಣಕಾಸಿನ ಮುಗ್ಗಟ್ಟು ಮತ್ತು ಬಡತನಕ್ಕೆ ಸಿಲುಕಿತು. ದೇಶದ ಖಜಾನೆಯಲ್ಲಿ ಹಣವಿರಲಿಲ್ಲ, ಜನರ ಕೈಯಲ್ಲಿ ಉದ್ಯೋಗಗಳಿರಲಿಲ್ಲ. ಅಂಥ ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿ ದೇಶದ ಆಡಳಿತಗಾರರು ಮತ್ತು ಆರ್ಥಿಕ ತಜ್ಞರು ಕಂಡುಕೊಂಡ ನವೀನ ಆಲೋಚನೆಯೇ ವಿಶ್ವದಾದ್ಯಂತ ಇರುವ ಅಂಚೆಚೀಟಿ ಸಂಗ್ರಾಹಕರನ್ನು ಸೆಳೆಯುವ ವಿಶಿಷ್ಟ ಅಂಚೆಚೀಟಿಗಳನ್ನು ಮುದ್ರಿಸುವುದು.




1912ರಲ್ಲಿ ಲಿಚ್ಟನ್‌ಸ್ಟೈನ್ ತನ್ನ ಮೊದಲ ಸ್ವತಂತ್ರ ಅಂಚೆಚೀಟಿಯನ್ನು ಬಿಡುಗಡೆ ಮಾಡಿತ್ತು. ಆದರೆ 1920 ಮತ್ತು 1930ರ ದಶಕಗಳಲ್ಲಿ ಈ ಕಲ್ಪನೆಯನ್ನು ಒಂದು ಪೂರ್ಣಪ್ರಮಾಣದ ರಾಷ್ಟ್ರೀಯ ಉದ್ಯಮವನ್ನಾಗಿ ಪರಿವರ್ತಿಸಲಾಯಿತು. ಆ ಕಾಲದಲ್ಲಿ ಜಗತ್ತಿನಾದ್ಯಂತ ಶ್ರೀಮಂತರು ಮತ್ತು ವಿದ್ಯಾವಂತರಲ್ಲಿ ಅಂಚೆಚೀಟಿಗಳನ್ನು ಸಂಗ್ರಹಿಸುವ ಹವ್ಯಾಸ ಅತ್ಯಂತ ಜನಪ್ರಿಯವಾಗಿತ್ತು. ಲಿಚ್ಟನ್‌ಸ್ಟೈನ್ ಸರಕಾರವು ಸಾಮಾನ್ಯ ಕಾಗದದ ಚೀಟಿಗಳನ್ನು ಮುದ್ರಿಸುವ ಬದಲು, ವಿಶ್ವದ ಶ್ರೇಷ್ಠ ಕಲಾವಿದರನ್ನು ಕರೆಸಿ, ಪುಟ್ಟ ಅಂಚೆಚೀಟಿಯನ್ನೇ ಒಂದು ಮಾಸ್ಟರ್‌ಪೀಸ್ ಚಿತ್ರಕಲೆಯನ್ನಾಗಿ ವಿನ್ಯಾಸಗೊಳಿಸಲು ಪ್ರಾರಂಭಿಸಿತು.

ಈ ಅದ್ಭುತ ಕಲಾತ್ಮಕತೆ ಜಾಗತಿಕ ಅಂಚೆ ಸಂಗ್ರಾಹಕರ ಕಣ್ಣು ಕುಕ್ಕಿತು. ಲಿಚ್ಟನ್ ಸ್ಟೈನ್ ಅಂಚೆ ಚೀಟಿಗಳು ಪ್ರಸಿದ್ಧಿಯಾಗಲು ಅವುಗಳ ಸೌಂದರ್ಯ ಮತ್ತು ಸಾಟಿಯಿಲ್ಲದ ಗುಣಮಟ್ಟವೇ ಮುಖ್ಯ ಕಾರಣ. ದೇಶದ ನೈಸರ್ಗಿಕ ಆಲ್ಪ್ಸ್ ಪರ್ವತಗಳ ಸುಂದರ ದೃಶ್ಯಗಳು, ರಾಜಮನೆತನದ ಇತಿಹಾಸ, ಕೋಟೆ-ಕೊತ್ತಲಗಳು, ಅಪರೂಪದ ವನ್ಯಜೀವಿಗಳು, ಯುರೋಪಿಯನ್ ಜಾನಪದ ಕಥೆಗಳು ಮತ್ತು ವಿಶ್ವಪ್ರಸಿದ್ಧ ವರ್ಣಚಿತ್ರಗಳ ಮರುಸೃಷ್ಟಿಯನ್ನು ಈ ಚೀಟಿಗಳ ಮೇಲೆ ಅತ್ಯಂತ ನಿಖರವಾಗಿ ಮೂಡಿಸಲಾಗುತ್ತದೆ.

ಇವುಗಳನ್ನು ಮುದ್ರಿಸಲು ಬಳಸುವ ಕಾಗದ, ಬಣ್ಣಗಳು ಮತ್ತು ಕೆತ್ತನೆ ತಂತ್ರಜ್ಞಾನಗಳು ಎಷ್ಟು ಅತ್ಯುನ್ನತ ಮಟ್ಟದಲ್ಲಿರುತ್ತವೆ ಎಂದರೆ, ಪ್ರತಿಯೊಂದು ಅಂಚೆಚೀಟಿಯೂ ಭೂತಗನ್ನಡಿಯಿಟ್ಟು ನೋಡಬೇಕಾದ ಒಂದು ಅದ್ಭುತ ಸೂಕ್ಷ್ಮ ಕಲಾಕೃತಿಯಂತೆ ಕಂಗೊಳಿಸುತ್ತದೆ. ಕಾಲಕ್ರಮೇಣ ಅಂಚೆಚೀಟಿಗಳ ಮಾರಾಟವು ಲಿಚ್ಟನ್ ಸ್ಟೈನ್‌ನ ಆರ್ಥಿಕತೆಗೆ ಸಂಜೀವಿನಿಯಂತೆ ಒದಗಿಬಂತು.

20ನೇ ಶತಮಾನದ ಮಧ್ಯಭಾಗದಲ್ಲಿ, ಅಂದರೆ 1930ರಿಂದ 1970ರ ದಶಕಗಳ ಅವಧಿಯಲ್ಲಿ, ಈ ಅಂಚೆ ಚೀಟಿಗಳ ಮಾರಾಟದಿಂದಲೇ ದೇಶದ ವಾರ್ಷಿಕ ಬಜೆಟ್‌ನ ಶೇ. 20ರಿಂದ 30ರಷ್ಟು ಆದಾಯ ಬರುತ್ತಿತ್ತು ಎಂಬುದು ನಂಬಲಸಾಧ್ಯವಾದರೂ ಸತ್ಯ. ಯಾವುದೇ ಕಾರ್ಖಾನೆಗಳಿಲ್ಲದ, ಸೇನೆ ಇಲ್ಲದ ಮತ್ತು ತೆರಿಗೆ ಆದಾಯ ತೀರಾ ಕಡಿಮೆಯಿದ್ದ ದೇಶಕ್ಕೆ ರಸ್ತೆಗಳನ್ನು ನಿರ್ಮಿಸಲು, ಶಾಲೆ-ಆಸ್ಪತ್ರೆಗಳನ್ನು ಕಟ್ಟಲು ಮತ್ತು ಆಧುನಿಕ ಮೂಲಸೌಕರ್ಯಗಳನ್ನು ಕಲ್ಪಿಸಲು ಈ ಅಂಚೆಚೀಟಿಗಳ ಮಾರಾಟದಿಂದ ಬಂದ ಆದಾಯವೇ ಮೂಲ ಬಂಡವಾಳವಾಯಿತು. ಒಂದು ಪುಟ್ಟ ಕಾಗದದ ಚೂರು ಇಡೀ ದೇಶದ ಆರ್ಥಿಕತೆಯನ್ನೇ ಮೇಲೆತ್ತಿದ ಅಪರೂಪದ ಇತಿಹಾಸವಿದು.

– **ವಿಶ್ವೇಶ್ವರ** ಭಟ್

---

# ಹಳ್ಳಿಯಲ್ಲೊಂದು ದಿನ

ಗ್ರಾಮದ ಮೇಲೆ ಬಿರುಗಾಳಿ ಬೀಸುತ್ತಿದೆ. ಆಕಾಶವು ಕಪ್ಪಾಗಿದ್ದು, ಗುಡುಗು ಮತ್ತು ಮಿಂಚಿನ ಅಬ್ಬರ ಜೋರಾಗಿದೆ. ಎಂಟು ವರ್ಷದ ಅನಾಥ ಬಾಲಕಿ ಫ್ಯೋಕ್ಲಾ ಲಜ್ಜೆಬಿಡದೆ ಮಳೆಯಲ್ಲೇ ಓಡುತ್ತಿದ್ದಾಳೆ. ಅವಳು ಗ್ರಾಮದ ಚಮ್ಮಾರ ಟೆರೆಂಟಿಯನ್ನ ಹುಡುಕುತ್ತಿದ್ದಾಳೆ. ಟೆರೆಂಟಿ ಒಬ್ಬ ಎತ್ತರದ, ತೆಳ್ಳಗಿನ ವ್ಯಕ್ತಿ, ಅವನ ಮುಖದಲ್ಲಿ ಯಾವಾಗಲೂ ಒಂದು ರೀತಿಯ ಶಾಂತಿಯಿರುತ್ತದೆ.

ಟೆರೆಂಟಿ! ಟೆರೆಂಟಿ! ಎಂದು ಫ್ಯೋಕ್ಲಾ ಕೂಗುತ್ತಾ ಅವನನ್ನು ತೋಟದ ಬಳಿ ಕಂಡು ಕೊಂಡಳು. ನನ್ನ ಅಣ್ಣ ದಾನಿಲ್ಕಾ ತೊಂದರೆಯಲ್ಲಿದ್ದಾನೆ! ಬನ್ನಿ!

ದಾನಿಲ್ಕಾ ಎಂಬ ಆರು ವರ್ಷದ ಬಾಲಕನು ಕಾಡಿನಲ್ಲಿ ಮರದ ಪೊಟರೆಯೊಳಗೆ ಸಿಕ್ಕಿಹಾಕಿಕೊಂಡಿದ್ದ. ಒಂದು ಗುಬ್ಬಚ್ಚಿಯ ಗೂಡಿನಿಂದ ಮರಿಯನ್ನು ಹೊರತೆಗೆಯಲು ಪ್ರಯತ್ನಿಸುವಾಗ ಅವನ ಕೈ ಮರದ ಸಂದುವಿನಲ್ಲಿ ಸಿಲುಕಿಕೊಂಡಿತ್ತು. ಟೆರೆಂಟಿ ಗಾಬರಿಗೊಳ್ಳದೆ, ನಡಿ ಮಗಳೇ, ಹೋಗೋಣ, ಎಂದು ಮಳೆಯನ್ನು ಲೆಕ್ಕಿಸದೆ ಅವಳ ಜೊತೆ ಹೊರಟನು.

ಅವರು ಕಾಡಿನ ಕಡೆಗೆ ನಡೆಯುತ್ತಿರುವಾಗ ಪ್ರಕೃತಿಯಲ್ಲಿನ ಬದಲಾವಣೆಗಳನ್ನು ಟೆರೆಂಟಿ ಆಕೆಗೆ ವಿವರಿಸುತ್ತಾನೆ. ಗುಡುಗು ಕೇಳಿದಾಗ ಅದು ದೇವರು ಬಂಡಿ ಓಡಿಸುತ್ತಿರುವುದು, ಎಂದು ತಮಾಷೆ ಮಾಡುತ್ತಾನೆ. ದಾರಿಯಲ್ಲಿ ಸಿಗುವ ಇರುವೆಗಳು, ಹೂವುಗಳು ಮತ್ತು ಮರಗಳ ಬಗ್ಗೆ ಅವನಿಗೆ ಅಪಾರ ಜ್ಞಾನವಿದೆ. ಅವನು ಶಾಲೆಯಲ್ಲಿ ಓದಿದವನಲ್ಲ, ಆದರೆ ಅವನಿಗೆ ಪ್ರಕೃತಿಯೇ ಶಾಲೆಯಾಗಿತ್ತು.

ಅವರು ದಾನಿಲ್ಕಾ ಬಳಿ ತಲುಪಿದಾಗ, ಟೆರೆಂಟಿ ಬಹಳ ಜಾಗರೂಕತೆಯಿಂದ ಮರದ ಸಂದನ್ನು ಸಡಿಲಿಸಿ ಅವನ ಕೈಯನ್ನು ಬಿಡಿಸುತ್ತಾನೆ. ಮಕ್ಕಳಿಗೆ ತೀವ್ರ ಹಸಿವು ಮತ್ತು ದಣಿವಾಗಿತ್ತು.



ಟೆರೆಂಟಿ ತನ್ನ ಬಳಿ ಇದ್ದ ಬ್ರೆಡ್ ತುಂಡನ್ನು ಅವರಿಗೆ ಹಂಚುತ್ತಾನೆ.

ಮಳೆ ನಿಂತು ಆಕಾಶ ತಿಳಿಯಾದಾಗ, ಕಾಡು ಮತ್ತಷ್ಟು ಸುಂದರವಾಗಿ ಕಾಣಿಸುತ್ತದೆ. ಟೆರೆಂಟಿ ದಾರಿಯುದ್ದಕ್ಕೂ ಹಕ್ಕಿಗಳ ಹಾಡು, ನದಿಯ ಹರಿವು ಮತ್ತು ಗಾಳಿಯ ಮರ್ಮರವನ್ನು ಮಕ್ಕಳಿಗೆ ವಿವರಿಸುತ್ತಾ ಹೋಗುತ್ತಾನೆ.

ಆ ಮಕ್ಕಳಿಗೆ ಟೆರೆಂಟಿ ಕೇವಲ ಒಬ್ಬ ಚಮ್ಮಾರನಲ್ಲ, ಬದಲಿಗೆ ಇಡೀ ಪ್ರಪಂಚದ ರಹಸ್ಯಗಳನ್ನು ಬಲ್ಲ ಒಬ್ಬ ದೊಡ್ಡ ವಿದ್ವಾಂಸನಂತೆ ಕಾಣುತ್ತಾನೆ.

ಸಂಜೆ ಹೊತ್ತಿಗೆ ಅವರು ಹಳ್ಳಿಗೆ ಮರಳುತ್ತಾರೆ. ದಾನಿಲ್ಕಾ ಮತ್ತು ಫ್ಯೋಕ್ಲಾ ಒಂದು ಹಳೆಯ ಕೊಟ್ಟಿಗೆಯಲ್ಲಿ ಹುಲ್ಲಿನ ಮೇಲೆ ಮಲಗುತ್ತಾರೆ. ಅವರಿಗೆ ನಿದ್ರೆ ಬರುತ್ತಿಲ್ಲ, ಅವರ ಮನಸ್ಸಿನಲ್ಲಿ ಟೆರೆಂಟಿ ಹೇಳಿದ ಮಾತುಗಳೇ ಸುಳಿಯುತ್ತಿವೆ. ಆ ಮುದಿ ಚಮ್ಮಾರ ಮಾತ್ರ ರಾತ್ರಿಯ ಚಳಿಯಲ್ಲೂ ಆ ಮಕ್ಕಳ ಪಕ್ಕದಲ್ಲಿ ಕುಳಿತು ಅವರಿಗೆ ಕಂಬಳಿ ಹೊದಿಸುತ್ತಾನೆ.

ಲೋಕಕ್ಕೆ ಟೆರೆಂಟಿ ಒಬ್ಬ ಸಾಮಾನ್ಯ ಬಡವನಾಗಿ ಕಾಣಬಹುದು, ಆದರೆ ಆ ಅನಾಥ ಮಕ್ಕಳಿಗೆ ಅವನು ದೇವರಿಗಿಂತ ದೊಡ್ಡವನಾಗಿದ್ದ.

– **ಕೆ.ಪಿ.ಅಶ್ವಿನ್** ರಾವ್

---

**ಮೂರನೆಯವನು ಸನ್ಯಾಸಿಯಂತೆ ದೇಶಾಟನೆಗೆ ಹೊರಟು, ಪಯಣದ ಹಾದಿಯಲ್ಲಿ ಗುರುಮುಖೇನ ಮೃತದೇಹಗಳಿಗೆ ಜೀವ ತುಂಬುವ ಅಪೂರ್ವ ಸಂಜೀವಿನಿ ವಿದ್ಯೆಯನ್ನು ಸಿದ್ಧಿಸಿಕೊಂಡು ಮರಳಿ ಬಂದನು. ಮೂರನೆಯವನು ಸ್ಮಶಾನಕ್ಕೆ ಬಂದು, ಬೂದಿಯ ರಕ್ಷಣೆ ಮಾಡುತ್ತಿದ್ದ ಸ್ನೇಹಿತನಿಂದ ನಮ್ಮ ವಿಳಾಸ ಭಸ್ಮವನ್ನು ಪಡೆದು, ಚಿತೆಗೆ ಹಾರಿದವನ ದೇಹದ ಮೇಲೂ ಮಂತ್ರಜಲ ಚಿಮುಕಿಸಿದನು.**

# ವಿಕ್ರಮ ಬೇತಾಳ: ಮಂದಾರವತಿ ಮತ್ತು ಮೂವರು ಪ್ರೇಮಿಗಳ ಕತೆ

ಒಂದೊಳ್ಳೆ ಮಾತು

ಕಥಾಸರಿತ್ಸಾಗರದ ಬೇತಾಳ ಪಂಚವಿಂಶತಿಯ ಎರಡನೆಯ ಕಥೆಯು ತ್ಯಾಗ ಮತ್ತು ಸಂಬಂಧಗಳ ನೈಜ ಧರ್ಮಸೂಕ್ಷ್ಮವನ್ನು ಅರಿಯಲು ಒಂದು ಅಪರೂಪದ ಕನ್ನಡಿ ಹಿಡಿಯುತ್ತದೆ. ಯಮುನಾ ತೀರದ ಬ್ರಹ್ಮಸ್ಥಳ ಎಂಬ ಅಗ್ರಹಾರದಲ್ಲಿ ಅಗ್ನಿಸ್ವಾಮಿ ಎಂಬ ವಿದ್ವಾಂಸನ ಮಗಳಾದ ಮಂದಾರ ವತಿಯು ಅಪ್ರತಿಮ ಲಾವಣ್ಯವತಿಯಾಗಿದ್ದಳು. ಆಕೆಯ ಗುಣ-ರೂಪಗಳಿಗೆ ಮಾರು ಹೋದ ಮೂವರು ಸಮಾನ ರೂಪ-ವಿದ್ಯಾವಂತ ಯುವಕರು ಆಕೆಯ ಕೈಹಿಡಿಯಲು ಮುಂದಾದರು.

ತಂದೆಗೆ ಯಾರಿಗೆ ಕನ್ಯೆ ನೀಡಬೇಕೆಂಬ ಗೊಂದಲವಿರುವಾಗಲೇ, ದುರಾದೃಷ್ಟವಶಾತ್ ಆ ಯುವತಿ ತೀವ್ರ ಜ್ವರದಿಂದ ಅಕಾಲಿಕ ಮರಣವನ್ನಪ್ಪಿದಳು. ಆಕೆಯ ಅಂತ್ಯಸಂಸ್ಕಾರದ ವೇಳೆ ಮೂವರೂ ಪ್ರೇಮಿಗಳ ಪ್ರತಿಕ್ರಿಯೆ ಬೇರೆ ಬೇರೆಯಾಗಿತ್ತು. ಮೊದಲನೆಯವನು ವಿರಹದ ತೀವ್ರತೆಗೆ ಆಕೆಯ ಚಿತೆಗೇ ಹಾರಿ ತನ್ನ ಪ್ರಾಣವನ್ನೇ ಅರ್ಪಿಸಿದನು. ಎರಡನೆಯವನು ಆಕೆಯ ಚಿತಾಭಸ್ಮವನ್ನು ಗಂಟುಕಟ್ಟಿ, ಸ್ಮಶಾನದ ಕುಟೀರ ನೀವೂ ಬರೆಯಬಹುದು ನಿರ್ಮಿಸಿಕೊಂಡು ಬೂದಿಯ ರಕ್ಷಣೆ ಮಾಡುತ್ತಾ ತಪಸ್ವಿಯಂತೆ ಬದುಕತೊಡಗಿದನು.

ಮೂರನೆಯವನು ಸನ್ಯಾಸಿಯಂತೆ ದೇಶಾಟನೆಗೆ ಹೊರಟು, ಪಯಣದ ಹಾದಿಯಲ್ಲಿ ಗುರುಮುಖೇನ ಮೃತದೇಹಗಳಿಗೆ ಜೀವ ತುಂಬುವ ಅಪೂರ್ವ ಸಂಜೀವಿನಿ ವಿದ್ಯೆಯನ್ನು ಸಿದ್ಧಿಸಿಕೊಂಡು ಮರಳಿ ಬಂದನು. ಮೂರನೆಯವನು ಸ್ಮಶಾನಕ್ಕೆ ಬಂದು, ಬೂದಿಯ ರಕ್ಷಣೆ ಮಾಡುತ್ತಿದ್ದ ಸ್ನೇಹಿತನಿಂದ ನಮ್ಮ ವಿಳಾಸ ಭಸ್ಮವನ್ನು ಪಡೆದು, ಚಿತೆಗೆ ಹಾರಿದವನ ದೇಹದ ಮೇಲೂ ಮಂತ್ರಜಲ ಚಿಮುಕಿಸಿದನು. ಆ ಸಂಜೀವಿನಿ ಮಂತ್ರದ ಮಹಿಮೆಯಿಂದ ಚಿತೆಗೆ ಹಾರಿದ ಯುವಕ ಹಾಗೂ ಆ ಯುವತಿ ಇಬ್ಬರೂ ಮರುಜನ್ಮ ಪಡೆದು ಮೊದಲಿನಂತೆ ಜೀವಂತವಾಗಿ ಎದ್ದು ನಿಂತರು!

ಮೂವರೂ ಪ್ರೇಮಿಗಳು ಮತ್ತೆ ಆಕೆಯ ಎದುರು ನಿಂತು, ನನ್ನ ತ್ಯಾಗದಿಂದಲೇ ನಿನಗೆ ಪುನರ್ಜನ್ಮ, ನೀನು ನನಗೇ ಸೇರಬೇಕು ಎಂದು ಪಟ್ಟುಹಿಡಿದರು. ಕಥೆಯನ್ನು ಮುಗಿಸಿದ ಬೇತಾಳನು ವಿಕ್ರಮಾದಿತ್ಯನಿಗೆ ಧರ್ಮಸಂಕಟದ ಪ್ರಶ್ನೆಯೊಡ್ಡುತ್ತಾನೆ: ಹೇ ರಾಜಾ, ಆಕೆಯ ಪುನರುತ್ಥಾನದಲ್ಲಿ ಮೂವರ ಶ್ರಮವೂ ಇದೆ. ಇವರಲ್ಲಿ ಆ ಯುವತಿಯನ್ನು ಧರ್ಮಬದ್ಧವಾಗಿ ಪತ್ನಿಯಾಗಿ ಸ್ವೀಕರಿಸಲು ನಿಜವಾದ ಅರ್ಹತೆ ಯಾರಿಗೆ ಸೇರುತ್ತದೆ? ವಿಕ್ರಮಾದಿತ್ಯನು ಆಳವಾದ ವಿವೇಕದಿಂದ ಹೀಗೆ ಉತ್ತರಿಸುತ್ತಾನೆ: ಸಂಜೀವಿನಿ ವಿದ್ಯೆಯಿಂದ ಜೀವ ಕೊಟ್ಟವನು ಆಕೆಗೆ ಎರಡನೆಯ ಜನ್ಮ ನೀಡಿದ ಕಾರಣ ಪಿತೃಸಮಾನನಾಗುತ್ತಾನೆ (ತಂದೆಯ ಸ್ಥಾನ).

ಆಕೆಯ ಚಿತಾಭಸ್ಮವನ್ನು ಕಾಪಾಡಿ, ಸಂಸ್ಕಾರ ಮಾಡಿ ಉಳಿಸಿಕೊಂಡವನು ತರ್ಪಣ ನೀಡಿದ ಮಗನಿಗೆ ಸಮಾನನಾಗುತ್ತಾನೆ (ಪುತ್ರ ಸ್ಥಾನ). ಆದರೆ, ಆಕೆಯ ಸಾವಿನ ದುಃಖವನ್ನು ತಾಳಲಾರದೆ ಜೊತೆಯ ಚಿತೆಗೆ ಹಾರಿ, ಆಕೆಯೊಂದಿಗೆ ಸಾವನ್ನು ಹಂಚಿಕೊಂಡು ಮತ್ತೆ ಮರುಜೀವ ಪಡೆದ ಮೊದಲನೆಯವನಷ್ಟೇ ಆಕೆಯ ನಿಜವಾದ ಪತಿಯಾಗಲು ಅರ್ಹ!

ಏಕೆಂದರೆ ವಿವಾಹವೆಂಬುದು ಸಾವು-ಬದುಕಿನಲ್ಲಿ ಸಮಾನವಾಗಿ ಬೆರೆತುಹೋಗುವ ಸಮರ್ಪಣಾ ಭಾವ. ನಮ್ಮ ಬದುಕಿನಲ್ಲೂ ನಾವು ಸಂಬಂಧಗಳನ್ನು ಹಲವು ಬಾರಿ ಕೇವಲ ಉಪಕಾರ, ಸಹಾಯ ಅಥವಾ ಶ್ರಮದ ಲೆಕ್ಕಾಚಾರದಲ್ಲಿ ಅಳೆದುಬಿಡುತ್ತೇವೆ. ಯಾರೋ ಒಬ್ಬರು ನಮಗೆ ದೊಡ್ಡ ಅನುಕೂಲ ಮಾಡಿಕೊಟ್ಟಿರಬಹುದು ಅಥವಾ ಉಪಕಾರದ ಋಣದಲ್ಲಿ ನಮ್ಮನ್ನು ಕಟ್ಟಿಹಾಕಿರಬಹುದು. ಆದರೆ ಕೇವಲ ಉಪಕಾರ ಅಥವಾ ಬಾಹ್ಯ ಸಾಧನೆಗಳು ಆತ್ಮೀಯತೆಯ ಮಾಪನವಾಗಲು ಸಾಧ್ಯವಿಲ್ಲ.

ನಿಜವಾದ ಒಡನಾಟ ಮತ್ತು ಪ್ರೀತಿ ಇರುವುದು ಕಷ್ಟ-ಸುಖ, ಸಾವು-ನೋವುಗಳಲ್ಲಿ ಪರಸ್ಪರರ ಜೊತೆಗೆ ಸಂಪೂರ್ಣವಾಗಿ ಬೆರೆತು ನಿಲ್ಲುವ ಭಾವನಾತ್ಮಕ ಮನಸ್ಥಿತಿಯಲ್ಲಿ. ಬದುಕಿನ ಏಳು ಬೀಳುಗಳಲ್ಲಿ ಜೊತೆಯಾಗಿ ನಿಲ್ಲುವ, ನಮ್ಮ ನೋವನ್ನು ತನ್ನದೇ ಎಂದು ಹಂಚಿಕೊಳ್ಳುವ ಸಮರ್ಪಣಾ ಮನಸ್ಥಿತಿಯೇ ಸಂಬಂಧಗಳ ಜೀವಸೆಲೆ. ಲೆಕ್ಕಾಚಾರದ ಉಪಕಾರಕ್ಕಿಂತ, ಹೃದಯದ ನಿಸ್ವಾರ್ಥ ಸಹಭಾಗಿತ್ವವೇ ಪ್ರತಿಯೊಂದು ಸಂಬಂಧಕ್ಕೂ ನಿಜವಾದ ಸಾರ್ಥಕತೆಯನ್ನು ತಂದು ಕೊಡುತ್ತದೆ. ಆದಷ್ಟು ಲೆಕ್ಕಾಚಾರಗಳಿಲ್ಲದ ಬದುಕನ್ನ ಆರಿಸಿಕೊಳ್ಳೋಣ.

ನಾವು ನಿಸ್ವಾರ್ಥವಾಗಿ ಮತ್ತೊಬ್ಬರನ್ನು ಪ್ರೀತಿಸಿ ಅವರ ಕಷ್ಟ ಸುಖಗಳಲ್ಲಿ ಜೊತೆ ಇದ್ದಾಗ, ಅಂಥದ್ದೇ ಪ್ರೀತಿ ಅನುಬಂಧ ನಮ್ಮ ಜೀವನದಲ್ಲಿ ನೂರು ಪಟ್ಟಾಗಿ ಸಿಗುತ್ತದೆ. ಅದನ್ನು ಗಳಿಸುವ ಉಳಿಸಿಕೊಳ್ಳುವ ಯೋಗ ಯೋಗ್ಯತೆ ನಮ್ಮದಾಗಬೇಕು.

– **ರೂಪಾ** ಗುರುರಾಜ್



---



# ಅನಂತ್ ಹಾದಿ: ಕೌಶಲವೇ ಬದುಕಿನ ಸೂತ್ರ

ನಾವು ಓದುವ ಮಾಧ್ಯಮ ಮತ್ತು ಬದುಕುವ ಪರಿಸರ ಬದಲಾದರೆ, ಜೀವನದ ದಿಕ್ಕೇ ಎಷ್ಟು ಆಮೂಲಾಗ್ರವಾಗಿ ಬದಲಾಗಿಬಿಡುತ್ತದೆ ಎನ್ನುವುದಕ್ಕೆ ನಟ ಅನಂತ್ ನಾಗ್ ಅವರ ಬದುಕೇ ಒಂದು ಸೊಗಸಾದ ನಿದರ್ಶನ.

ಕನ್ನಡದ ಮಣ್ಣಿನಲ್ಲಿ ಹುಟ್ಟಿ, ಸುಮಾರು ಆರು ವರ್ಷಗಳ ಕಾಲ ಆಶ್ರಮದ ಶಾಂತ ವಾತಾವರಣದಲ್ಲಿ ಬೆಳೆದ ನಾಗ್ ಸಹೋದರರಿಗೆ ಮುಂಬೈನ ಭಿನ್ನ ಸಂಸ್ಕೃತಿಗೆ ಹೊಂದಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಅಲ್ಲಿಯವರೆಗೂ ಕನ್ನಡ ಮಾಧ್ಯಮದಲ್ಲೇ ಕಲಿತಿದ್ದ ಅವರಿಗೆ, ಮುಂಬೈ ಸೇರಿದ ಮೇಲೆ ಏಕಾಏಕಿ ಇಂಗ್ಲಿಷ್ ಮಾಧ್ಯಮಕ್ಕೆ ಒಗ್ಗಿಕೊಳ್ಳುವುದು ದೊಡ್ಡ ಸವಾಲಾಗಿ ಪರಿಣಮಿಸಿತು. ಒಂದು ವೇಳೆ ಅವರು ಬೆಂಗಳೂರಿನಲ್ಲೇ ಉಳಿದು, ತಮ್ಮ ಎಂದಿನ ಶೈಲಿಯಲ್ಲೇ ಓದಿದ್ದರೆ ಏನಾಗುತ್ತಿತ್ತು? ಬಹುಶಃ ಯಾವುದೋ ಬ್ಯಾಂಕ್ ಉದ್ಯೋಗದಲ್ಲೋ ಅಥವಾ ಕಾರ್ಪೊರೇಟ್ ಕಚೇರಿಯಲ್ಲೋ ಕಳೆದುಹೋಗಿರುತ್ತಿದ್ದರು. ಭಾರತೀಯ ಚಿತ್ರರಂಗ ಕಂಡ ಇಂಥ ಅಪರೂಪದ, ಅದ್ಭುತ ನಟನ ಅಭಿನಯವನ್ನು ಕಣ್ತುಂಬಿಕೊಳ್ಳುವ ಅವಕಾಶವೇ ನಮಗೆ ಸಿಗುತ್ತಿರಲಿಲ್ಲವೇನೋ!

ಅನಂತ್ ನಾಗ್ ಅವರ ಶೈಕ್ಷಣಿಕ ಪಯಣದಲ್ಲೂ ಇಂಥದ್ದೇ ಅನಿರೀಕ್ಷಿತ ತಿರುವುಗಳಿವೆ. ತಮ್ಮ ಸಂಪ್ರದಾಯಬದ್ಧ ಜೀವನಶೈಲಿಯ ಕಾರಣದಿಂದಾಗಿ ಅವರು ಬಯಾಲಜಿ ಲ್ಯಾಬ್‌ನಲ್ಲಿ ಕಪ್ಪೆ, ಜಿರಳೆಗಳನ್ನು ಕತ್ತರಿಸಲಾರದೆ ವಿಜ್ಞಾನ ವಿಭಾಗವನ್ನೇ ಬಿಟ್ಟು ಕಾಮರ್ಸ್ ಸೇರಿಕೊಂಡರು. ಸೂಕ್ತ ಮಾರ್ಗದರ್ಶನವಿಲ್ಲದೆ, ಸೂತ್ರ ಹರಿದ ಗಾಳಿಪಟದಂತೆ ಬದುಕು ಸಾಗುತ್ತಿದ್ದ ದಿನಗಳವು. ಆದರೆ ಅನಿಶ್ಚಿತತೆಯ ಆ ಕತ್ತಲಲ್ಲೇ ಅವರಿಗೆ ರಂಗಭೂಮಿ ಕೈಹಿಡಿಯಿತು. ಬಾಲ್ಯದಲ್ಲಿ ಜನರ ಹಾವಭಾವಗಳನ್ನು ನಕಲು ಮಾಡುತ್ತಿದ್ದ ಅನಂತ್ ನಾಗರಕಟ್ಟೆ, ತಾವು ಹುಟ್ಟಿದ್ದೇ ನಟನಾ ರಂಗಕ್ಕೆ ಎಂಬುದನ್ನು ಕಂಡುಕೊಂಡರು; ಮುಂದಿನದೆಲ್ಲವೂ ಈಗ ಬೆಳ್ಳಿಪರದೆಯ ಸುವರ್ಣ ಇತಿಹಾಸ.

ಈ ಘಟನಾವಳಿಗಳು ಇಂದಿನ ತಲೆಮಾರಿಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತವೆ. ಜೀವನದಲ್ಲಿ ನಾವು ಅಂದುಕೊಂಡಂತೆ ಎಲ್ಲವೂ ನಡೆಯದಿದ್ದಾಗ, ಮುಂದೇನು ಮಾಡಬೇಕೆಂದು ತೋಚದೆ ಕಂಗಾಲಾದಾಗ, ನಮ್ಮ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳಬಾರದು. ಕಾಲ ಬದಲಾದಂತೆ ಬದುಕಿಗೆ ಆಸರೆಯಾಗುವುದು ನಮ್ಮಲ್ಲಿರುವ ಒಂದು ನೈಜ ಕೌಶಲ ಮಾತ್ರ.

ವಿಶೇಷವಾಗಿ ಇಂದಿನ ಕೃತಕ ಬುದ್ಧಿಮತ್ತೆಯ ಯುಗದಲ್ಲಿ, ಪೋಷಕರು ತಮ್ಮ ಮಕ್ಕಳನ್ನು ಯಾವ ಕೋರ್ಸ್‌ಗೆ ಸೇರಿಸಬೇಕು, ಅವರನ್ನು ಇಂಜಿನಿಯರ್ ಮಾಡಬೇಕೋ ಬೇಡವೋ ಎಂಬ ಗೊಂದಲದಲ್ಲಿ ತೊಳಲಾಡುತ್ತಿದ್ದಾರೆ. ಆದರೆ ವಾಸ್ತವವೆಂದರೆ, ಮಗುವನ್ನು ಅದರ ನೈಜ ಪ್ರತಿಭೆ ಮತ್ತು ಆಸಕ್ತಿಯಿಂದ ವಂಚಿಸಬಾರದು; ಪೋಷಕರ ಪ್ರತಿಷ್ಠೆ ಹಾಗೂ ಅಹಂಕಾರಕ್ಕೆ ಮಕ್ಕಳ ಭವಿಷ್ಯ ಬಲಿಯಾಗಬಾರದು. ನಾವು ಇಂಜಿನಿಯರ್ ಅಥವಾ ಡಾಕ್ಟರ್ ಆಗಿರಬಹುದು, ಆದರೆ ನಮ್ಮ ಮಕ್ಕಳೂ ಕಡ್ಡಾಯವಾಗಿ ಅದೇ ಜಾಡನ್ನು ಹಿಡಿಯಬೇಕೆಂಬ ಹಠ ಖಂಡಿತ ಸಮಂಜಸವಲ್ಲ. ಬದುಕಿನ ತಿರುವುಗಳನ್ನು ಧೈರ್ಯದಿಂದ ಎದುರಿಸಿ, ತಮ್ಮೊಳಗಿನ ಸಹಜ ಪ್ರತಿಭೆಯನ್ನು ಗುರುತಿಸಿಕೊಳ್ಳಲು ಮಕ್ಕಳಿಗೆ ಅವಕಾಶ ನೀಡಿದಾಗ ಮಾತ್ರ, ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

# ಕುಡಿಯುವ ನೀರಿನ ಸಮಸ್ಯೆ ತೀವ್ರ: ಪರಿಹಾರಕ್ಕೆ ಆಗ್ರಹ

## ಸಕಲೇಶಪುರ ತಾಲ್ಲೂಕನ್ನೂ ಬರಪೀಡಿತ ಎಂದು ಘೋಷಿಸಿ: ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ



**ಅರಸೀಕೆರೆ:** ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಸಕಲೇಶಪುರ ತಾಲ್ಲೂಕನ್ನೂ ಬರ ಪೀಡಿತ ಎಂದು ಘೋಷಿಸಿ ಅಗತ್ಯ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹಲವು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಆದರೆ ಸಕಲೇಶ ಪುರವನ್ನು ಕೈಬಿಟ್ಟಿರುವುದು ಸರಿಯಲ್ಲ. ಮಳೆಯ ಕೊರತೆಯಿಂದ ಕಾಫಿ ತೋಟಗಳು ನಷ್ಟವಾಗುತ್ತಿದ್ದು, ಎರಡು–ಮೂರು ದಿನ ಮಳೆ ಬಾರದಿದ್ದರೂ ಕಾಫಿ ಬೆಳೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದರು.

**ಕುಡಿಯುವ ನೀರಿಗೆ ಮೊದಲು ಆದ್ಯತೆ ನೀಡಲಿ:**

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತುರ್ತಾಗಿ 2 ರಿಂದ 3 ಕೋಟಿ ರೂ. ಅನುದಾನವನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಬೇಕು. ಅಗತ್ಯವಿರುವ ಕಡೆ ಬೋರ್‌ವೆಲ್, ಪೈಪ್‌ಲೈನ್‌ಗಳನ್ನು ನಿರ್ಮಿಸಿ, ನೀರಿನ ಕೊರತೆ ಇರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿಗಾಗಿ ಪ್ರತಿ ಕ್ಷೇತ್ರಕ್ಕೆ ಪ್ರತ್ಯೇಕವಾಗಿ 5 ಕೋಟಿ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಸುಮಾರು 2.20 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬೆಳೆ ನಷ್ಟವಾಗಿದೆ. ರೈತರು ಮಾಡಿರುವ ಖರ್ಚಿನ ಆಧಾರದ ಮೇಲೆ ಪರಿಹಾರ ನೀಡಬೇಕು. ಕೇವಲ 2 ಸಾವಿರ ಪರಿಹಾರ ನೀಡುವುದರಿಂದ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗಿದ್ದು, ಕೇಂದ್ರದ ತಂಡವೂ ಜಿಲ್ಲೆಗೆ ಭೇಟಿ ನೀಡಿದೆ ಎಂದು ಹೇಳಿದರು.

**ಒನ್‌ಟೈಮ್ ಸಾಲ ಮನ್ನಾ ಘೋಷಣೆಗೆ ಆಗ್ರಹ:**

ಪ್ರಸ್ತುತ ಪರಿಸ್ಥಿತಿಯಲ್ಲಿ ರೈತರ ಸಂಕಷ್ಟ ನಿವಾರಿಸಲು ಸರ್ಕಾರ ಮತ್ತೊಮ್ಮೆ ಒನ್‌ಟೈಮ್ ಸಾಲಮನ್ನಾ ಮಾಡಬೇಕು. ಹಿಂದೆ ಜಿಲ್ಲಾ ಬ್ಯಾಂಕ್ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡಿದ್ದನ್ನು ಉಲ್ಲೇಖಿಸಿದ ಅವರು, ಈಗಲೂ ರೈತರ ನೆರವಿಗೆ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

**ಪಿಂಚಣಿ ವಿಳಂಬಕ್ಕೆ ಅಧಿಕಾರಿಗಳ ವಿರುದ್ಧ ಆಕ್ರೋಶ:**

ಗ್ರಾಮೀಣ ಪ್ರದೇಶಗಳಲ್ಲಿ 8085 ವರ್ಷದ ವೃದ್ಧರು, ವಿಧವೆಯರು ಹಾಗೂ ಅಂಗವಿಕಲರು 6ರಿಂದ 8 ತಿಂಗಳಿನಿಂದ ಪಿಂಚಣಿ ಸಿಗದೆ ಪರದಾಡುತ್ತಿದ್ದಾರೆ. ಪಿಂಚಣಿ ಹಣವೇ ಕೆಲವರಿಗೆ ಜೀವನಾಧಾರವಾಗಿದೆ. ಆದರೆ ಕಂದಾಯ ಇಲಾಖೆಯ ವಿಎ, ಆರ್ ಐ ಹಾಗೂ ತಹಶೀಲ್ದಾರ್‌ಗಳು ಕಚೇರಿಯಲ್ಲಿ ಸಿಗುತ್ತಿಲ್ಲ ಎಂಬ ದೂರುಗಳಿವೆ ಎಂದು ರೇವಣ್ಣ ಆರೋಪಿಸಿದರು.

ಜಿಲ್ಲಾಧಿಕಾರಿಗಳು ಪ್ರತಿದಿನ ಕನಿಷ್ಠ ನಾಲ್ಕು ಗಂಟೆಯಾದರೂ ಕಚೇರಿಯಲ್ಲಿ ಕುಳಿತು ಪಿಂಚಣಿ ಸೇರಿದಂತೆ ಬಾಕಿ ಇರುವ ಜನರ ಕೆಲಸಗಳನ್ನು ಬಗೆಹರಿಸಬೇಕು. ಒಂದು ತಿಂಗಳೊಳಗೆ ಸಮಸ್ಯೆ ಪರಿಹರಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

**ಅರಸೀಕೆರೆ ಜನರ ಋಣ ಮರೆಯಲು ಸಾಧ್ಯವಿಲ್ಲ:**

ಅರಸೀಕೆರೆಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ಭಾವುಕರಾಗಿ ಮಾತನಾಡಿದ ರೇವಣ್ಣ, ಅರಸೀಕೆರೆ ಜನರು ತಮ್ಮ ಪಕ್ಷವನ್ನು ಮೂರು ಬಾರಿ ಗೆಲ್ಲಿಸಿದ್ದು, ಅವರ ಋಣವನ್ನು ಜೀವನಪೂರ್ತಿ ತೀರಿಸಲು ಸಾಧ್ಯವಿಲ್ಲ ಎಂದರು. ಎಲ್ಲ ಸಮಾಜದ ಜನರು ತಮ್ಮನ್ನು ಬೆಂಬಲಿಸಿ ಪಕ್ಷವನ್ನು ಉಳಿಸಿದ್ದಾರೆ ಎಂದು ಸ್ಮರಿಸಿದರಲ್ಲದೆ, ಪಂಚಾಯಿತಿ ಹಾಗೂ ನಗರಸಭೆ ಮೀಸಲಾತಿ ವಿಚಾರ ನ್ಯಾಯಾಲಯದಲ್ಲಿದ್ದು, ಕುಮಾರಸ್ವಾಮಿ ಮತ್ತು ದೇವೇಗೌಡರು ಕೈಗೊಳ್ಳುವ ತೀರ್ಮಾನದಂತೆ ಪಕ್ಷ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದರು.

**2028ಕ್ಕೆ ಸಾಮೂಹಿಕ ನಾಯಕತ್ವ:**

2028ರ ವಿಧಾನಸಭಾ ಚುನಾವಣೆಯವರೆಗೆ ಎಲ್ಲರೂ ಸಾಮೂಹಿಕ ನಾಯಕತ್ವದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಹಾಸನ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಕುಮಾರಸ್ವಾಮಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಗೆಲ್ಲಿಸುವ ಗುರಿಯೊಂದಿಗೆ ಕಾರ್ಯಕರ್ತರು ಸಂಘಟಿತರಾಗಬೇಕು ಎಂದು ರೇವಣ್ಣ ಅವರು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಗಂಗಾಧರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಶೇಖರಪ್ಪ, ಜಿಪಂ ಮಾಜಿ ಅಧ್ಯಕ್ಷೆ ವತ್ಸಲ ಶೇಖರಪ್ಪ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಚಂದ್ರಶೇಖರ್, ಜೆಡಿಎಸ್ ಮುಖಂಡ ಲಾಳನಕೆರೆ ಯೋಗೀಶ್, ಗಣೇಶ್, ಬಸವಲಿಂಗಪ್ಪ ಉಪಸ್ಥಿತರಿದ್ದರು.

# ಅಗತ್ಯ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನ

## ಸಮುದಾಯ ಭವನ ಕಾಮಗಾರಿಗೆ ಶಾಸಕ ಸಿ.ಎನ್.ಬಾಲಕೃಷ್ಣ ಗುದ್ದಲಿಪೂಜೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣದ ಪೌರ ಕಾರ್ಮಿಕರ ಸಮುದಾಯ ಭವನದ ಸಿಲಿಂಗ್, ವಿದ್ಯುತ್ ವ್ಯವಸ್ಥೆ ಸೇರಿದಂತೆ ಅಗತ್ಯ ಕಾಮಗಾರಿಗಳಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಪುರಸಭೆಯ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿ ಹೆಚ್ಚುವರಿಯಾಗಿ 10 ಲಕ್ಷ ರೂ. ಒದಗಿಸಲಾಗುವುದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ರೇಣುಕಾ ನಗರ, ಬಸವನಕಟ್ಟೆ ಸಂತೆ ಮೈದಾನದಲ್ಲಿರುವ ಪೌರಕಾರ್ಮಿಕರ ಸಮುದಾಯ ಭವನದ ಉಳಿಕೆ ಕಾಮಗಾರಿ ಹಾಗೂ ಮರು ನಿರ್ಮಾಣ ಕಾರ್ಯಕ್ಕೆ ಬುಧವಾರ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೊಳಚೆ ನಿರ್ಮೂಲ ಮಂಡಳಿಯಿಂದ ಹಿಂದೆ ನಿರ್ಮಿಸಲಾಗಿದ್ದ ಸಮುದಾಯ ಭವನವನ್ನು ಪ್ರಸ್ತುತ ಪುರಸಭೆಯ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿ 30 ಲಕ್ಷ ರೂ. ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ಪೌರಕಾರ್ಮಿಕರು ಹಾಗೂ ಸ್ಥಳೀಯ ನಾಗರಿಕರಿಗೆ ಶುಭ ಕಾರ್ಯ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದರು.

ಕಾರ್ಯಕ್ರಮಗಳ ವೇಳೆ ಊಟದ ವ್ಯವಸ್ಥೆ ಮಾಡಲು ಸೂಕ್ತ ಹಾಲ್ ಇಲ್ಲದಿರುವುದನ್ನು ಗಮನಿಸಿ, ಸಾರ್ವಜನಿಕರ ಅನುಕೂಲಕ್ಕಾಗಿ ಊಟದ ಹಾಲ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನವೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಸಮುದಾಯ ಭವನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಸುಸಜ್ಜಿತವಾಗಿ ನಡೆಸಲು ಅನುಕೂಲವಾಗಲಿದೆ ಎಂದ ಅವರು, ಮುಂದಿನ ಹಂತದಲ್ಲಿ ಸಿಲಿಂಗ್, ವಿದ್ಯುತ್ ವ್ಯವಸ್ಥೆ ಸೇರಿದಂತೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರ ಮತ್ತು ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಸಿ.ಎಸ್.ಪ್ರಕಾಶ್, ಅಭಿಯಂತರರಾದ ಗಿರೀಶ್, ಬಸವರಾಜು, ಮಾಜಿ ಅಧ್ಯಕ್ಷ ರಾಣಿಕೃಷ್ಣ, ಮುಖಂಡರಾದ ಕೃಷ್ಣ, ಶಾಮಿಯಾನ ರಘು, ಗುತ್ತಿಗೆದಾರ ಅಝರ್‌ಖಾನ್, ಪುರಸಭೆ ಅಧಿಕಾರಿಗಳು, ಪೌರ ಕಾರ್ಮಿಕರು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

# ಕ್ರಾಫರ್ಡ್ ಆಸ್ಪತ್ರೆಯಲ್ಲಿ ಡೆಫಿಬ್ರಿಲೇಟರ್ ಘಟಕ ಉದ್ಘಾಟನೆ

## 5ನೇ ತಿಂಗಳ ಗರ್ಭಿಣಿಯರ ಸ್ಕ್ಯಾನಿಂಗ್: ಆಸ್ಪತ್ರೆಯಿಂದಲೇ ಚಿಕಿತ್ಸಾ ವೆಚ್ಚ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಯಲ್ಲಿ ದುರಸ್ತಿಗೊಂಡ ಸ್ಕ್ಯಾನಿಂಗ್ ಯಂತ್ರ ಹಾಗೂ ಹೃದಯಾಘಾತದ ತುರ್ತು ಸಂದರ್ಭಗಳಲ್ಲಿ ಬಳಸುವ ಡೆಫಿಬ್ರಿಲೇಟರ್ ಘಟಕವನ್ನು ಶಾಸಕ ಸಿಮೆಂಟ್ ಮಂಜು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಹಲವು ವರ್ಷಗಳಿಂದ ಸ್ಕ್ಯಾನಿಂಗ್ ಯಂತ್ರ ಬಳಕೆಗೆ ಲಭ್ಯವಿಲ್ಲದ ಕಾರಣ ಸಾರ್ವಜನಿಕರಿಗೆ ತೊಂದರೆಯಾಗುತ್ತಿತ್ತು. ರೇಡಿಯಾಲಜಿಸ್ಟ್ ವೈದ್ಯರ ನೇಮಕ ಹಾಗೂ ಯಂತ್ರದ ದುರಸ್ತಿ ಕುರಿತು ನಾನು ಶಾಸಕನಾದ ನಂತರ ಸರ್ಕಾರಕ್ಕೆ ನಿರಂತರವಾಗಿ ಮನವಿ ಮಾಡಲಾಗಿತ್ತು. ಇದೀಗ ಸ್ಕ್ಯಾನಿಂಗ್ ಯಂತ್ರದ ದುರಸ್ತಿ ಸಂಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ಸೇವೆ ಲಭ್ಯವಾಗುವಂತೆ ಮಾಡಲಾಗಿದೆ ಎಂದು ಹೇಳಿದರು.

ಗರ್ಭಿಣಿಯರು ಸೇರಿದಂತೆ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸ್ಕ್ಯಾನಿಂಗ್ ಸೇವೆ ಒದಗಿಸಲಾಗುವುದು. ಐದನೇ ತಿಂಗಳ ಗರ್ಭಿಣಿಯರ ಸ್ಕ್ಯಾನಿಂಗ್‌ಗೆ ಅಗತ್ಯವಿರುವ ಸುಧಾರಿತ ತಂತ್ರಜ್ಞಾನದ ಸೌಲಭ್ಯವನ್ನು ಸದ್ಯ ಹೊರಗಡೆ ಮಾಡಿಸಲಾಗುತ್ತಿದ್ದು, ಅದರ ವೆಚ್ಚವನ್ನು ಆಸ್ಪತ್ರೆ ವತಿಯಿಂದ ಭರಿಸುವ ವ್ಯವಸ್ಥೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಬೇಕಾದ ಅಗತ್ಯ ತಂತ್ರಜ್ಞಾನವನ್ನು ಆಸ್ಪತ್ರೆಯಲ್ಲೇ ಒದಗಿಸುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಹೃದಯಾಘಾತ ಅಥವಾ ಎದೆನೋವಿನ ಸಂದರ್ಭಗಳಲ್ಲಿ ತುರ್ತು ಚಿಕಿತ್ಸೆ ನೀಡಲು ಡೆಫಿಬ್ರಿಲೇಟರ್ ಉಪಕರಣ ಅಳವಡಿಸಲಾಗಿದೆ. ಹೃದಯ ಬಡಿತ ಸ್ಥಗಿತಗೊಂಡಂತಹ ತುರ್ತು ಪರಿಸ್ಥಿತಿಯಲ್ಲಿ ವಿದ್ಯುತ್ ಶಾಕ್ ಮೂಲಕ ಹೃದಯದ ಬಡಿತವನ್ನು ಪುನಃ ಪ್ರಾರಂಭಿಸಲು ಈ ಉಪಕರಣ ನೆರವಾಗಲಿದೆ. ಇದರಿಂದ ತುರ್ತು ಸಂದರ್ಭಗಳಲ್ಲಿ ರೋಗಿಗಳಿಗೆ ಸಮಯೋಚಿತ ಚಿಕಿತ್ಸೆ ನೀಡಲು ಅನುಕೂಲವಾಗಲಿದೆ ಎಂದು ಅವರು ತಿಳಿಸಿದರು.

ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಪ್ರತಿದಿನ ಸುಮಾರು 600 ರಿಂದ 800 ಮಂದಿ ರೋಗಿಗಳು ಚಿಕಿತ್ಸೆಗೆ ಆಗಮಿಸುವ ಸಂದರ್ಭಗಳಿವೆ. ಇದಕ್ಕೆ ಅನುಗುಣವಾಗಿ ಆಸ್ಪತ್ರೆಯಲ್ಲಿ ಸಿಬ್ಬಂದಿ ಹಾಗೂ ಇತರೆ ಸೌಲಭ್ಯಗಳನ್ನು ಹಂತ- ಹಂತವಾಗಿ ಹೆಚ್ಚಿಸುವ ಅಗತ್ಯವಿದ್ದು, ಈ ಕುರಿತು ಆರೋಗ್ಯ ಸಚಿವರಿಗೂ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿಗಾಗಿ ವೈದ್ಯರು, ಸಿಬ್ಬಂದಿಗಳು ನಿರಂತರ ಶ್ರಮ ಪಡುತ್ತಿದ್ದಾರೆ. ಸಾರ್ವಜನಿಕರು ವಿನಾ ಕಾರಣ ಕಾರಣ ತೊಂದರೆ ಕೊಡಬಾರದು. ವಿವಿಧ ಸಂಘಟನೆಗಳು ಹಾಗೂ ಮಾಧ್ಯಮಗಳು ವೈದ್ಯರಿಗೆ ಸಹಕಾರ ನೀಡಬೇಕು. ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಅಗತ್ಯ ಸೌಲಭ್ಯಗಳನ್ನು ಮತ್ತಷ್ಟು ಹೆಚ್ಚಿಸಲು ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಕಿಶೋರ್, ಕ್ರಾಫರ್ಡ್ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಅರುಣ್, ತಜ್ಞ ವೈದ್ಯರಾದ ಡಾ.ನಿಶ್ಚಿತ, ಡಾ.ವೆಂಕಟೇಶ್, ಡಾ. ಹೇಮಂತ್‌ಭಟ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ವಿ.ವಿ. ಮಟ್ಟದ ಅಂತರ ಕಾಲೇಜು ನಾ ಮೆಚ್ಚಿದ ಕೃತಿ ಅಭಿಪ್ರಾಯ ಮಂಡನೆ ಸ್ಪರ್ಧೆ

# ಸಾಹಿತ್ಯದ ಓದು ನಮ್ಮ ಬದುಕಿನ ಭಾಗವಾಗಬೇಕು

• ಪ್ರಜೋದಯ ವರದಿ



**ಹಾಸನ:** ಯುವಕರ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯ ಪುಸ್ತಕಗಳು ಬಹುಮುಖ್ಯ, ಯುವ ಪೀಳಿಗೆಗೆ ಸರಿಯಾದ ದಿಕ್ಕನ್ನು ತೋರಿಸಬೇಕಾಗಿದ್ದ ಕಾಲೇಜುಗಳ ಕರ್ತವ್ಯ, ಇವು ನಮ್ಮ ವ್ಯಕ್ತಿತ್ವವನ್ನು ಸ್ಪಷ್ಟಪಡಿಸುತ್ತವೆ ಎಂದು ಸಾಹಿತಿ ಹಾಗೂ ಮಹಿಳಾಪರ ಚಿಂತಕಿ ರೂಪ ಹಾಸನ ಅವರು ವಿದ್ಯಾರ್ಥಿಗಳಿಗೆ ತಿಳಿಸಿದ್ದಾರೆ.

ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ) ಹಾಸನದಲ್ಲಿ ಕನ್ನಡ ವಿಭಾಗ, ಗ್ರಂಥಾಲಯ, ಮಾಹಿತಿ ಕೇಂದ್ರ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘ ಇವುಗಳ ಸಂಯುಕ್ತಾಶ್ರಯದಲ್ಲಿ ಹಾಸನ ವಿಶ್ವವಿದ್ಯಾನಿಲಯದ ಮಟ್ಟದ ಅಂತರ ಕಾಲೇಜು ನಾ ಮೆಚ್ಚಿದ ಕೃತಿ ಅಭಿಪ್ರಾಯ ಮಂಡನೆ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ನೆಲೆಯಲ್ಲಿ ಬೆಳೆಯಲು ಯಾವ ಪುಸ್ತಕಗಳನ್ನು ಓದಬೇಕು ಎಂಬುದು ಯುವಕರಿಗೆ ಮುಖ್ಯವಾಗುತ್ತದೆ, ಸಾಹಿತ್ಯದ ಓದು ನಮ್ಮ ಬದುಕಿನ ಭಾಗವಾಗಬೇಕು ಎಂದು ತಿಳಿಸಿದರು.

ಪುಸ್ತಕಗಳು ಗುರುವಿಗೆ ಸಮಾನ, ಇವು ಬದುಕನ್ನು ರೂಪಿಸುವುದು ಮಾತ್ರವಲ್ಲ ಅನೇಕರ ಬದುಕನ್ನು ಧನಾತ್ಮಕ ನೆಲೆಯಲ್ಲಿ ಬದಲಾಯಿಸಿವೆ, ಜೀವ ವೈವಿಧ್ಯತೆ, ಖಗೋಳ ವಿಜ್ಞಾನ, ಸಸ್ಯ ಜಗತ್ತು, ಪತ್ರಿಕೋದ್ಯಮ, ಕಾನೂನು ಈ ರೀತಿಯ ನಿಮಗೆ ಆಸಕ್ತಿಯ ಪುಸ್ತಕಗಳನ್ನು ಓದುವ ಮೂಲಕ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು.

ಗಾಂಧಿಯವರನ್ನು ವಿವೇಕಾನಂದರವರನ್ನು ರೂಪಿಸಿದ್ದು ಸಾಹಿತ್ಯ ಪುಸ್ತಕಗಳು, ಕೇವಲ ವಿಷಯ ಮಂಡನೆಗೆ ಮಾತ್ರ ಸಾಹಿತ್ಯದ ಓದು, ಆಸಕ್ತಿ ನಿಲ್ಲಬಾರದು, ಓದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಬೇಕು, ಬದುಕಿನ ಅನೇಕ ಸವಾಲುಗಳಿಗೆ ಧೈರ್ಯ ಕೊಡುವಂತದ್ದು ಈ ಸಾಹಿತ್ಯ ಪುಸ್ತಕಗಳೇ ಎಂದರು.

ಹಿಂಸೆ ಮತ್ತು ಅಶಾಂತಿಯನ್ನು ತೊರೆದು ಸಾಮಾಜಿಕವಾಗಿ ಎಲ್ಲರನ್ನೂ ಒಳಗೊಳ್ಳುವ ಮುಕ್ತ ಸಮಾಜವನ್ನು ನಿರ್ಮಿಸಲು ಈ ಪುಸ್ತಕಗಳ ಓದಿನಿಂದ ಮಾತ್ರ ಸಾಧ್ಯ ಎಂದು ಸ್ಪಷ್ಟಪಡಿಸಿದರು, ಕಾರ್ಯಕ್ರಮದಲ್ಲಿ ಹಾಸನ ವಿಶ್ವವಿದ್ಯಾನಿಲಯಕ್ಕೆ ಸೇರಿದ ಹಲವು ಪದವಿ ಕಾಲೇಜುಗಳಿಂದ ಸುಮಾರು 55 ವಿದ್ಯಾರ್ಥಿಗಳು ಈ ಕಾರ್ಯಕ್ರಮಕ್ಕೆ ನೋಂದಣಿ ಮಾಡಿಕೊಂಡು ಭಾಗವಹಿಸಿದ್ದು ಹಲವು ಸಾಹಿತ್ಯ ಕೃತಿಗಳ ಓದಿನ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಪ್ರಾಂಶುಪಾಲ ಡಾ. ಕೆ.ನಟರಾಜ್ ಪ್ರಾಧ್ಯಾಪಕರಾದ ಡಾ. ದಿನೇಶ್, ರಾಮೇಗೌಡ ಬಿ.ಎಚ್., ಸಂಘಟನಾ ಕಾರ್ಯದರ್ಶಿ ಡಾ.ರವಿ ಎನ್.ಸಿ., ಮಹೇಶ ವೈಎಚ್, ಹೇಮೇಶ ಹೆಚ್ ಎನ್, ಡಾ.ಧರ್ಮೇಂದ್ರ, ಶರ ರಾಜ ಕೆ.ಎಂ, ಹಾಗೂ ಕಿರಣ ಹೆಚ್.ಎಂ. ಮತ್ತಿತರರು ಉಪಸ್ಥಿತರಿದ್ದರು.

ಅರಕಲಗೂಡು ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ ನ್ಯಾಯಾಲಯದಲ್ಲಿ

ಸಿಆರ್.ಮಿಸ್.988/2026

ಅರ್ಜಿದಾರರು:

1) ದ್ಯಾವಮ್ಮ ಕೋಂ ಲೇಟ್ ಚನ್ನಯ್ಯ ಸುಮಾರು 86 ವರ್ಷ, ಬೆಟ್ಟದಹಳ್ಳಿ ಗ್ರಾಮ,ದೊಡ್ಡಮಗ್ಗೆ ಹೋಬಳಿ,ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2) ಚನ್ನವೀರಯ್ಯ ಬಿನ್ ಲೇಟ್ ಈರಯ್ಯ,ಸುಮಾರು 76 ವರ್ಷ,
3) ಚನ್ನಾಜಮ್ಮ ಕೋಂ ಚನ್ನವೀರಯ್ಯಸುಮಾರು 63 ವರ್ಷ,
2&3ನೇ ಅರ್ಜಿದಾರರ ವಿಳಾಸ:ಕೋನಾಪುರ ಗ್ರಾಮ, ಕೊಣನೂರು ಹೋಬಳಿ,ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.

ವಿರುದ್ಧ:

ಎದುರುಅರ್ಜಿದಾರರು :–ತಹಸೀಲ್ದಾರ್ ರವರು, ಜನನ–ಮರಣ ನೋಂದಣಾಧಿಕಾರಿ,ತಾಲ್ಲೂಕು ಕಛೇರಿ,ಅರಕಲಗೂಡು, ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.

ಪತ್ರಿಕಾ ಪ್ರಕಟಣೆ

1&2ನೇ ಅರ್ಜಿದಾರರ ತಾಯಿ, 3ನೇ ಅರ್ಜಿದಾರರ ಅತ್ತೆಯವರಾದ ದ್ಯಾವಮ್ಮ ಕೋಂ ಈರಯ್ಯ ರವರು ದಿನಾಂಕ:– 03/04/1975 ರಂದು ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಕೋನಾಪುರ ಗ್ರಾಮದ ತಮ್ಮ ಸ್ವ–ಗೃಹದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ:–2/11/2026ರ ಬೆಳಿಗ್ಗೆ 11–00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

2026ನೇ ವರ್ಷದ ಸೆಪ್ಟೆಂಬರ್ ತಿಂಗಳ 29 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
(ಹರೀಶ ಬಿ.ಆರ್)
ವಕೀಲರು, ಅರಕಲಗೂಡು
ದಿನಾಂಕ: 29/09/2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

## ಖಾಸಗಿ ಆಸ್ಪತ್ರೆಗೆ ರೋಗಿಗಳ ರವಾನೆ: ಪ್ರತಿಭಟನೆ ಎಚ್ಚರಿಕೆ

### 108 ಆ್ಯಂಬುಲೆನ್ಸ್ ಚಾಲಕರ ವಿರುದ್ಧ ನಮ್ಮ ಹಾಸನ ಟ್ರಸ್ಟ್ ಆಕ್ರೋಶ

• ಪ್ರಜೋದಯ ವರದಿ



**ಹಾಸನ:** ಸರ್ಕಾರಿ ಆಸ್ಪತ್ರೆಯಲ್ಲಿ ಅಗತ್ಯ ಸೌಲಭ್ಯಗಳಿದ್ದರೂ 108 ಆ್ಯಂಬುಲೆನ್ಸ್ ಚಾಲಕರು ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಕರೆದೊಯ್ಯುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಮುಂದೆ ಇಂತಹ ಘಟನೆಗಳು ಕಂಡುಬಂದರೆ ಪ್ರತಿಭಟನೆ ನಡೆಸಲಾಗುವುದು ಎಂದು ನಮ್ಮ ಹಾಸನ ಟ್ರಸ್ಟ್ ಅಧ್ಯಕ್ಷ ಕೆ.ಹರೀಶ್ ಅವರು ಎಚ್ಚರಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಣವಾರ ಸಮೀಪದ ಇತ್ತೀಚೆಗೆ ಅಪಘಾತಕ್ಕೀಡಾದ ಶರತ್ ಹೇಮಂತ್ ಅವರನ್ನು 108 ಆ್ಯಂಬುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸದೆ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಲಕ್ಷಾಂತರ ರೂಪಾಯಿ ವೆಚ್ಚವಾಗಲಿದೆ ಎಂದು ತಿಳಿಸಿದ ಸಂದರ್ಭದಲ್ಲಿ ಹಣ ಪಾವತಿಸಲು ಸಾಧ್ಯವಾಗದೆ ಕುಟುಂಬದವರು ಸಂಕಷ್ಟಕ್ಕೆ ಸಿಲುಕಿದೆ ಎಂದು ದೂರಿದರು.

ಈ ವಿಷಯ ತಿಳಿದು ಆಸ್ಪತ್ರೆಗೆ ತೆರಳಿ ಮಾತುಕತೆ ನಡೆಸಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿಯೇ ಚಿಕಿತ್ಸೆ ಕೊಡಿಸುವ ವ್ಯವಸ್ಥೆ ಮಾಡಲಾಯಿತು. ಹಿಮ್ಸ್‌ನ ನಾಲ್ವರು ಶಸ್ತ್ರಚಿಕಿತ್ಸಕರು ಯುವಕನ ಶಸ್ತ್ರಚಿಕಿತ್ಸೆ ನಡೆಸಿ ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ. ಜಿಲ್ಲೆಯಲ್ಲಿ 27 ಸರ್ಕಾರಿ ಆ್ಯಂಬುಲೆನ್ಸ್‌ಗಳಿದ್ದು, 25 ಕಾರ್ಯ ನಿರ್ವಹಿಸುತ್ತಿವೆ. ಎರಡು ವಾಹನಗಳು ದುರಸ್ತಿಯಲ್ಲಿವೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಮಾಹಿತಿ ನೀಡಿದ್ದಾರೆ. ಅಪಘಾತ ಸೇರಿ ತುರ್ತು ಸಂದರ್ಭಗಳಲ್ಲಿ ರೋಗಿಗಳನ್ನು ನೇರವಾಗಿ ಹಿಮ್ಸ್‌ಗೆ ದಾಖಲಿಸುವ ವ್ಯವಸ್ಥೆಯಾಗಬೇಕು. ಯಾವುದೇ ಕಾರಣಕ್ಕೂ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಬಾರದು ಎಂದು ಅವರು ಒತ್ತಾಯಿಸಿದರು.

ವಿನೀತ್, ಕೃಷ್ಣೇಗೌಡ, ರೂಪಾ ಹಾಗು ರಂಗಸ್ವಾಮಿ ಹಾಜರಿದ್ದರು.

# ಟಿವಿ ಖರೀದಿ ಅಕ್ರಮ: ಲೋಕಾಯುಕ್ತ ತನಿಖೆಗೆ ಆಗ್ರಹ

• ಪ್ರಜೋದಯ ವರದಿ




**ಹಾಸನ:** ಅರಸೀಕೆರೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಟಿವಿ ಖರೀದಿಯಲ್ಲಿ ನಡೆಸಿರುವ ಅಕ್ರಮದ ಕುರಿತು ಲೋಕಾಯುಕ್ತ ಸಮಗ್ರ ತನಿಖೆ ನಡೆಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಕೆಆರ್‌ಎಸ್ ಪಕ್ಷದ ರಾಜ್ಯ ಸಂಚಾಲಕ ಉಮೇಶ್ ಬೆಳಗುಂಬ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಭ್ಯವಿರುವ ದಾಖಲೆಗಳು ಹಾಗು ತನಿಖಾ ವರದಿಯ ಪ್ರಕಾರ, ತಾಲ್ಲೂಕಿನ 62 ಶಾಲೆಗಳಿಗೆ ತಲಾ 55 ಸಾವಿರರೂ.ನಂತೆ ಅನುದಾನ ಬಿಡುಗಡೆ ಮಾಡಲಾಗಿದೆ. 58 ಶಾಲೆಗಳಲ್ಲಿ ಒಟ್ಟು 31.90 ಲಕ್ಷ ವೆಚ್ಚವಾಗಿದೆ. ಆದರೆ, 1 ಲಕ್ಷಕ್ಕಿಂತ ಹೆಚ್ಚಿನ ಖರೀದಿಗೆ ಟೆಂಡರ್ ಪ್ರಕ್ರಿಯೆ ಅಗತ್ಯವಿದ್ದರೂ, ಇಲ್ಲಿ ಟೆಂಡರ್ ಅಥವಾ ಪತ್ರಿಕಾ ಪ್ರಕಟಣೆ ನಡೆದಿರುವ ಬಗ್ಗೆ ದಾಖಲೆಗಳು ಸ್ಪಷ್ಟವಾಗಿಲ್ಲ ಎಂದು ಆರೋಪಿಸಿದರು.

ಮಾರುಕಟ್ಟೆಯಲ್ಲಿ 22,500 ರೂ.ಗೆ ದೊರೆಯುವ ಟಿವಿಗೆ 55,000 ಬಿಲ್ ಮಾಡಲಾಗಿದೆ. ಒಂದು ಟಿವಿಗೆ ಸುಮಾರು 32,500 ಹೆಚ್ಚುವರಿ ವೆಚ್ಚವಾಗಿದೆ. ಇದಲ್ಲದೆ, 62 ಶಾಲೆಗಳ ಪಟ್ಟಿ ಇದ್ದರೂ ತನಿಖಾ ವರದಿಯಲ್ಲಿ 58 ಶಾಲೆಗಳಷ್ಟೇ ಉಲ್ಲೇಖವಾಗಿದೆ. ಉಳಿದ 4 ಶಾಲೆಗಳಿಗೆ ಸಂಬಂಧಿಸಿದ ಸುಮಾರು 2.20 ಲಕ್ಷ ಅನುದಾನ ಎಲ್ಲಿಗೆ ಹೋಯಿತು ಎಂಬುದಕ್ಕೆ ಸ್ಪಷ್ಟ ಉತ್ತರ ನೀಡಬೇಕೆಂದು ಒತ್ತಾಯಿಸಿದರು.

ಶಾಲೆಗಳಿಗೆ ಟಿವಿ ನೀಡುವ ವಿಚಾರದಲ್ಲಿ ಕೆಲವು ಶಿಕ್ಷಣ ಸಂಯೋಜಕರ ಮೂಲಕ ಮುಖ್ಯ ಶಿಕ್ಷಕರಿಗೆ ದೂರವಾಣಿ ಕರೆ ಮಾಡಿ, ಸರ್ಕಾರದಿಂದಲೇ ಟಿವಿ ನೀಡಲಾಗುತ್ತಿದೆ ಎಂದು ತಿಳಿಸಿ 55,000 ರೂ. ಮೊತ್ತದ ಖಾಲಿ ಚೆಕ್ ನೀಡುವಂತೆ ಒತ್ತಡ ಹೇರಲಾಗಿದೆ. ಮೇಲಧಿಕಾರಿಗಳ ಸೂಚನೆ ಮೀರಿ ನಡೆದುಕೊಂಡರೆ ಕೆಲಸಕ್ಕೆ ತೊಂದರೆಯಾಗಬಹುದು ಎಂಬ ಭಯದಿಂದ ಶಿಕ್ಷಕರು ಚೆಕ್ ನೀಡಿದ್ದರೆ, ನಂತರ ಅದೇ ವಿಚಾರದಲ್ಲಿ ಶಿಕ್ಷಕರನ್ನೇ ಆರೋಪಿಗಳನ್ನಾಗಿ ಮಾಡಿ ನೋಟೀಸ್ ನೀಡಲಾಗಿದೆ ಎಂದು ದೂರಿದರು.

ಟಿವಿ ಖರೀದಿ ಹಾಗು ಅನುದಾನ ಬಳಕೆಯ ಬಗ್ಗೆ ಲೋಕಾಯುಕ್ತರಿಂದ ಸ್ವತಂತ್ರ ತನಿಖೆ ನಡೆಸಬೇಕು. ಮಕ್ಕಳ ಹಕ್ಕುಗಳ ಆಯೋಗ ಈ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಪರಿಗಣಿಸಬೇಕು. ತನಿಖಾ ವರದಿಯಲ್ಲಿ ತಪ್ಪಿತಸ್ಥರೆಂದು ಕಂಡುಬಂದ ಅಧಿಕಾರಿಗಳ ವಿರುದ್ಧ ತಕ್ಷಣ ಇಲಾಖಾ ಕ್ರಮ ಕೈಗೊಳ್ಳಬೇಕು. 62 ಶಾಲೆಗಳಿಗೂ ಸಂಬಂಧಿಸಿದ ಅನುದಾನ ಬಿಡುಗಡೆ, ಚೆಕ್, ಬಿಲ್, ಖರೀದಿ, ಟೆಂಡರ್, ಸರಬರಾಜು ಮತ್ತು ಹಣ ಪಾವತಿ ದಾಖಲೆಗಳನ್ನು ಸಾರ್ವಜನಿಕಗೊಳಿಸಬೇಕು ಎಂದು ಆಗ್ರಹಿಸಿದರು.

ಪಕ್ಷದ ಶರಣ್‌ಕುಮಾರ್, ಮಧು, ನಿರಂಜನ್, ಮಂಜೇಗೌಡ ಇದ್ದರು.

## ಕಳಪೆ ಗುಣಮಟ್ಟದ ಬೆಣ್ಣೆ ವಶಕ್ಕೆ

**ಹಾಸನ:** ಸಾರ್ವಜನಿಕರ ದೂರಿನ ಮೇರೆಗೆ ಕುವೆಂಪುನಗರ ಹಾಸನದಲ್ಲಿ ವಿಶ್ಲೇಷಣೆಗಾಗಿ ಕಳುಹಿಸಲಾಗಿದ್ದ ಬೆಣ್ಣೆಯು ಕಳಪೆ ಗುಣಮಟ್ಟದೆಂದು ದೃಢಪಟ್ಟಿರುವುದರಿಂದ ಆಹಾರ ಸುರಕ್ಷತ ಮತ್ತು ಗುಣಮಟ್ಟ ಕಾಯ್ದೆ–2006 ರ ಸೆಕ್ಷನ್–51 ರ ಪ್ರಕಾರ ದಂಡ ವಿಧಿಸುವ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಹಾಗೂ ಈಗಾಗಲೇ ಇವರಿಂದ 80 ಕೆ.ಜಿಯಷ್ಟು (ಅಂದಾಜು ಮೌಲ್ಯ 56000) ಬೆಣ್ಣೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಾಸನ ತಾಲ್ಲೂಕು ಆರೋಗ್ಯಾಧಿಕಾರಿ ಹಾಗೂ ಆಹಾರ ಸುರಕ್ಷತಾಧಿಕಾರಿ ಡಾ|| ಬಿ.ಎಂ.ವಿಜಯ್ ಅವರು ತಿಳಿಸಿದ್ದಾರೆ.

ಹಾಸನ ನಗರ ವ್ಯಾಪ್ತಿಯಲ್ಲಿನ ಸಂತೆ ಮತ್ತು ನಗರದ ಪ್ರಮುಖ ಸ್ಟೋರ್‌ಗಳಲ್ಲಿ ಅನುಮಾನಸ್ಪದವಾದ 7 ಬೆಣ್ಣೆಯ ಆಹಾರ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆ ಗಾಗಿ ಮೈಸೂರಿನ ವಿಭಾಗೀಯ ವಿಶ್ಲೇಷಕರ ಕಚೇರಿಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಹೆಚ್.ಎಂ.ಹಡಬಸವೇಗೌಡ ಮತ್ತು ಶಿವರಾಮ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

### ಆರೋಗ್ಯಕರ ಹೃದಯವು ನೀವು ಪ್ರೀತಿಸುವ ಪ್ರತಿಯೊಬ್ಬರಿಗೂ ಮಿಡಿಯುತ್ತದೆ

# ಹೃದಯದ ಆರೋಗ್ಯವೇ ಪ್ರತಿಯೊಬ್ಬರ ಸಂಪತ್ತು

• ಪ್ರಜೋದಯ ವರದಿ




**ಹಾಸನ:** ವಿಶ್ವ ಹೃದಯ ದಿನಚರಣೆ ಅಂಗವಾಗಿ ಜನಪ್ರಿಯ ಆಸ್ಪತ್ರೆಯಲ್ಲಿ ಬುಧವಾರ ಹೃದಯ ದಿನಚರಣೆ ಆಚರಿಸಲಾಯಿತು.

ಜನಪ್ರಿಯ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ.ಮಂಜುನಾಥ್ ಅವರು ಮಾತನಾಡಿ, 1978ರಲ್ಲಿ ವರ್ಲ್ಡ್ ಹಾರ್ಟ್ ಫೆಡರೇಶನ್ ಸ್ಥಾಪನೆಯಾಯಿತು. ಇದರ ವಾರ್ಷಿಕೋತ್ಸವದ ಅಂಗವಾಗಿ ಸೆಪ್ಟೆಂಬರ್ 29ರಂದು ವಿಶ್ವ ಹೃದಯ ದಿನವನ್ನು ಆರಂಭಿಸಲಾಗಿತ್ತು. ಜಾಗೃತಿಯನ್ನು ಮೂಡಿಸುವ ಮತ್ತು ವಿಶ್ವಾದ್ಯಂತ ಆರೋಗ್ಯಕರ ಹೃದಯದ ಜೀವನಶೈಲಿಯನ್ನು ಉತ್ತೇಜಿಸುವ ಸಲುವಾಗಿ 1999ರಲ್ಲಿ ಮೊದಲ ವಿಶ್ವ ಹೃದಯ ದಿನವನ್ನು ಆಚರಿಸಲಾಯಿತು. ಆರೋಗ್ಯಕರ ಹೃದಯವು ನಿಮಗಾಗಿ ಮಾತ್ರವಲ್ಲದೆ ನೀವು ಪ್ರೀತಿಸುವ ಪ್ರತಿಯೊಬ್ಬರಿಗೂ ಮಿಡಿಯುತ್ತದೆ. ಅದನ್ನು ಚೆನ್ನಾಗಿ ನೋಡಿಕೊಳ್ಳಿ, ನಿಮ್ಮ ಹೃದಯದ ಆರೋಗ್ಯವೇ ನಿಮ್ಮ ಸಂಪತ್ತು ಎಂದರು.

ಪ್ರತಿ ಹೃದಯ ಬಡಿತವೂ ಜೀವನದ ಅಮೂಲ್ಯತೆಯನ್ನು ನೆನಪಿಸುತ್ತದೆ. ಆರೋಗ್ಯವಂತ ಹೃದಯವೇ ಆರೋಗ್ಯವಂತ ಜೀವನದ ಆಧಾರ ಒತ್ತಡವನ್ನು ನಿಯಂತ್ರಿಸಿ. ನಿಯಮಿತ ತಪಾಸಣೆ ಮಾಡಿಸಿಕೊಳ್ಳಿ, ರಕ್ತದೊತ್ತಡ ಮತ್ತು ಸಕ್ಕರೆ ಅಂಶವನ್ನು ನಿಯಂತ್ರಣದಲ್ಲಿಡಿ. ಎದೆ ನೋವು ಕಾಣಿಸಿಕೊಂಡ ತಕ್ಷಣ ನಿರ್ಲಕ್ಷಿಸದೆ ತಕ್ಷಣ ಆಸ್ಪತ್ರೆಗೆ ಭೇಟಿ ನೀಡಿ. ನಿಮ್ಮ ಹೃದಯದ ಆರೋಗ್ಯವೇ ನಮ್ಮ ಜನಪ್ರಿಯ ಆಸ್ಪತ್ರೆಯ ಸಂಕಲ್ಪ, ಎಲ್ಲರಿಗೂ ವಿಶ್ವ ಹೃದಯ ದಿನದ ಶುಭಾಶಯಗಳು.

ಜನಪ್ರಿಯ ಫೌಂಡೇಶನ್‌ನ ಮುಖ್ಯಸ್ಥ ಡಾ.ಎ.ಕೆ.ಅಬ್ದುಲ್ ಬಷೀರ್ ಅವರು ಮಾತನಾಡಿ, ನಮ್ಮ ಆಸ್ಪತ್ರೆಯ ಹೃದಯರೋಗ ತಜ್ಞರಾದ ಡಾ. ಮಂಜುನಾಥ್ ಹೃದಯವಂತರು ಎಂದು ಹೇಳಿದರು. ನಿಮ್ಮ ಹೃದಯಕ್ಕೆ ಕಾಳಜಿ ವಹಿಸಿ ಪ್ರತಿ ಆರು ತಿಂಗಳಿಗೊಮ್ಮೆ ಬಿಪಿ ಮತ್ತು ಶುಗರ್ ಪರೀಕ್ಷೆಯನ್ನು ನಿರ್ಲಕ್ಷಿಸದೆ ಮಾಡಿಸಿಕೊಳ್ಳಿ, ಚಿಕಿತ್ಸೆ ಗಿಂತ ತಡೆಗಟ್ಟುವಿಕೆ ಉತ್ತಮ. ನಮ್ಮ ದೇಹವನ್ನು ಚೆನ್ನಾಗಿ ನೋಡಿಕೊಂಡಷ್ಟು ನಾವು ಖುಷಿಯಿಂದ ಇರುತ್ತೇವೆ ಎಂಬುದು ಸತ್ಯ. ಹೀಗಾಗಿ ದೇಹದ ಪ್ರತಿಯೊಂದು ಅಂಗಾಗಳ ಕಾಳಜಿ ಬಲು ಅಗತ್ಯ. ಅದರಲ್ಲಿ ಒಂದು ಹೃದಯದ ಕಾಳಜಿ. ಹೃದಯದ ಆರೋಗ್ಯ ಚೆನ್ನಾಗಿ ನೋಡಿಕೊಂಡಷ್ಟು ನಮ್ಮ ಬದುಕೂ ಚೆನ್ನಾಗಿ ಸಾಗುತ್ತದೆ. ವಿಶ್ವ ಹೃದಯ ದಿನದಂದು, ನಮ್ಮ ಹೃದಯವನ್ನು ಉತ್ತಮವಾಗಿ ನೋಡಿಕೊಳ್ಳಲು ಮತ್ತು ಆರೋಗ್ಯಕರ ಜೀವನವನ್ನು ನಡೆಸಲು ಪ್ರತಿಜ್ಞೆ ಮಾಡೋಣ. ಎಲ್ಲರ ಹೃದಯವು ಸದಾ ಚೈತನ್ಯ ಮತ್ತು ಸಂತೋಷದಿದ ಬಡಿಯಲಿ. ಹಾಸನ ಜಿಲ್ಲೆಯಲ್ಲಿ ಮೊದಲ ಹೃದ್ರೋಗ ಚಿಕಿತ್ಸೆ ಯನ್ನು ಪ್ರಾರಂಭಿಸಿದ್ದು ನಮ್ಮ ಜನಪ್ರಿಯ ಆಸ್ಪತ್ರೆ ಎಂದು ತಿಳಿಸಿದರು.

ಜನಪ್ರಿಯ ಫೌಂಡೇಶನ್ ಉಪಾಧ್ಯಕ್ಷೆ ಫಾತಿಮಾ ನಸ್ರೀನ್ ಬಶೀರ್, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಶಾರುಖ್ ಅಬ್ದುಲ್ಲಾ, ನರರೋಗ ಶಸ್ತ್ರಚಿಕಿತ್ಸಾ ತಜ್ಞ ಡಾ. ಗೌತಮ್, ಫಿಸಿಷಿಯನ್ ಡಾ.ಮನೋಜ್ ಕುಮಾರ್, ಜನರಲ್ ಸರ್ಜನ್ ಡಾ. ಪ್ರವೀಣ್ ಕುಮಾರ್, ಸ್ತ್ರೀರೋಗ ತಜ್ಞೆ ಡಾ.ಸುಮಾ, ಮಕ್ಕಳ ತಜ್ಞ ಡಾ. ಭರತ್, ಅರವಳಿಕೆ ವೈದ್ಯ ಡಾ. ಸುಹಾಸ್, ಮೂತ್ರಪಿಂಡ ಶಸ್ತ ಚಿಕಿತ್ಸಕ ಡಾ.ಮುರಳಿಧರ್, ದಂತ ತಜ್ಞ ಡಾ.ಶೋಯೆಬ್, ನಿವಾಸಿ ವೈದ್ಯರಾದ ಡಾ.ಫೈಜಲ್, ಡಾ.ಲೋಹಿತ್, ಡಾ. ಪ್ರಕಾಶ, ಡಾ. ಚೇತನ್, ಜನಪ್ರಿಯ ಆಡಳಿತ ಅಧಿಕಾರಿ ಮಹಮ್ಮದ್ ಕಿಸಾರ್, ವ್ಯವಸ್ಥಾಪಕ ಪ್ರಮೋದ್‌ಗೌಡ ಇತರರು ಪಾಲ್ಗೊಂಡಿದ್ದರು.

# ರಕ್ತ ಹೀನತೆ ತಡೆಗೆ ಪೌಷ್ಠಿಕ ಆಹಾರ ಸೇವಿಸಿ



• ಪ್ರಜೋದಯ ವರದಿ

**ಹಾಸನ:** ಮಹಿಳೆಯರು ರಕ್ತಹೀನತೆಯನ್ನು ಹೋಗಲಾಡಿಸಲು ಸ್ಥಳೀಯವಾಗಿ ಹಾಗೂ ಕಾಲ ಕಾಲಕ್ಕೆ ಸಿಗುವ ಹಣ್ಣು ತರಕಾರಿಗಳು ಸೊಪ್ಪು ಹಾಗೂ ಧಾನ್ಯಗಳಂತಹ ಪೌಷ್ಠಿಕ ಆಹಾರ ಸೇವಿಸುವಂತೆ ಶಾಸಕರಾದ ಸ್ವರೂಪ್ ಪ್ರಕಾಶ್ ಅವರು ತಿಳಿಸಿದ್ದಾರೆ.

ಹಾಸನ ನಗರದ ಚಿಪ್ಪಿನಕಟ್ಟೆ ಅಂಗನವಾಡಿ ಕೇಂದ್ರದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜನೆ ಮಾಡಲಾದ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕ ಆಹಾರ ನೀಡುವ ಮೂಲಕ ಅಪೌಷ್ಠಿಕತೆಯನ್ನು ನಿವಾರಿಸಬಹುದು ಎಂದು ಅವರು ತಿಳಿಸಿದರು.

ತಹಶೀಲ್ದಾರ್ ಗೀತಾ ಅವರು ಮಾತನಾಡಿ, ಬೇಕರಿ ತಿಂಡಿಗಳನ್ನು ಸೇವನೆ ಮಾಡಬಾರದು ಸ್ವತಃ ಮಹಿಳೆಯರೆ ಮೊಳಕೆ ಕಾಳು, ಸೊಪ್ಪು, ತರಕಾರಿಗಳನ್ನು ಪ್ರತಿ ದಿನ ತಮ್ಮ ಆಹಾರ ಪದ್ಧತಿಯಲ್ಲಿ ಬಳಸುವುದರಿಂದ ಅಪೌಷ್ಠಿಕತೆಯನ್ನು ಹೋಗಲಾಡಿಸಬಹುದು ಪೋಷಣ್ ಮಾಸಾಚರಣೆ ಸೆಪ್ಟೆಂಬರ್ ತಿಂಗಳಿಗೆ ಮಾತ್ರ ಸಿಮಿತವಾಗದೆ ಪ್ರತಿ ದಿನ ಬಳಕೆ ಮಾಡಬೇಕು ಎಂದು ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕೆ.ಸಿ.ಜ್ಯೋತಿಲಕ್ಷ್ಮಿ, ಆರ್.ಸಿ.ಹೆಚ್ ಅಧಿಕಾರಿ ಡಾ|| ಫಾತೀಮಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅರಕಲಗೂಡು ಗೌರವಾನ್ವಿತ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು & ಜೆ.ಎಮ್.ಎಫ್.ಸಿ ರವರ ನ್ಯಾಯಾಲಯದಲ್ಲಿ

ಸಿಆರ್.ಮಿಸ್.975/2026

ಅರ್ಜಿದಾರರು:

1) ದ್ಯಾವಮ್ಮ ಕೋಂ ಲೇಟ್ ಚನ್ನಯ್ಯಸುಮಾರು 86 ವರ್ಷ, ಬೆಟ್ಟದಹಳ್ಳಿ ಗ್ರಾಮ,ದೊಡ್ಡಮಗ್ಗೆ ಹೋಬಳಿ,ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2) ಚನ್ನವೀರಯ್ಯ ಬಿನ್ ಲೇಟ್ ಈರಯ್ಯ,ಸುಮಾರು 76 ವರ್ಷ,
3) ಚನ್ನಾಜಮ್ಮ ಕೋಂ ಚನ್ನವೀರಯ್ಯಸುಮಾರು 63 ವರ್ಷ,
2&3ನೇ ಅರ್ಜಿದಾರರ ವಿಳಾಸ:ಕೋನಾಪುರ ಗ್ರಾಮ, ಕೊಣನೂರು ಹೋಬಳಿ,ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.

ವಿರುದ್ಧ:

ಎದುರುಅರ್ಜಿದಾರರು :–ತಹಸೀಲ್ದಾರ್ ರವರು, ಜನನ–ಮರಣ ನೋಂದಣಾಧಿಕಾರಿ,ತಾಲ್ಲೂಕು ಕಛೇರಿ,ಅರಕಲಗೂಡು, ಅರಕಲಗೂಡು ತಾಲ್ಲೂಕು,ಹಾಸನ ಜಿಲ್ಲೆ.

ಪತ್ರಿಕಾ ಪ್ರಕಟಣೆ

1&2ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ಮಾವನವರಾದ ಈರಯ್ಯ ಬಿನ್ ಈರಯ್ಯ ರವರು ದಿನಾಂಕ:– 12/05/1965 ರಂದು ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಕೊಣನೂರು ಹೋಬಳಿ, ಕೋನಾಪುರ ಗ್ರಾಮದ ತಮ್ಮ ಸ್ವ–ಗೃಹದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ:–8/12/2026 ಬೆಳಿಗ್ಗೆ 11–00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

2026ನೇ ವರ್ಷದ ಸೆಪ್ಟೆಂಬರ್ ತಿಂಗಳ 24 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
(ಹರೀಶ ಬಿ.ಆರ್)
ವಕೀಲರು, ಅರಕಲಗೂಡು
ದಿನಾಂಕ: 24/09/2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

# ಸ್ಟಾರ್ಟ್‌ಅಪ್ ಉತ್ತೇಜನಕ್ಕೆ ಗವರ್ನರ್ಮೆಂಟ್ ಫಸ್ಟ್ ಉಪಕ್ರಮ

## ಮೂರು ವರ್ಷಕ್ಕೆ 25 ಕೋ.ರೂ. ನಿಗದಿ | ಸಚಿವ ಪ್ರಿಯಾಂಕ್ ಖರ್ಗೆ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದ ಸ್ಟಾರ್ಟ್‌ಅಪ್‌ಗಳಿಗೆ ಸರ್ಕಾರಿ ಇಲಾಖೆಗಳ ಅಗತ್ಯಗಳಿಗೆ ಪರಿಹಾರ ಒದಗಿಸುವ ಅವಕಾಶದ ಜೊತೆಗೆ ತಮ್ಮ ಉತ್ಪನ್ನಗಳು ಮತ್ತು ತಂತ್ರಜ್ಞಾನಗಳನ್ನು ನೈಜ ಸರ್ಕಾರಿ ಪರಿಸರದಲ್ಲಿ ಪರೀಕ್ಷಿಸಿ ಮೌಲ್ಯಮಾಪನಗೊಳಿಸಿ ಯಶಸ್ವಿಯಾದ ಪರಿಹಾರಗಳನ್ನು ಸರ್ಕಾರಿ ಖರೀದಿಗೆ ಒಳಪಡಿಸುವ ಉದ್ದೇಶದಿಂದ ಗವರ್ನರ್ಮೆಂಟ್ ಫಸ್ಟ್ ಉಪಕ್ರಮ ಜಾರಿಗೆ ತರಲಾಗುತ್ತಿದೆ ಎಂದು ಗೃಹ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದ್ದಾರೆ.

ಸ್ಟಾರ್ಟ್‌ಅಪ್ ನೀತಿ 2025-30ರ ಅಡಿಯಲ್ಲಿ ಎಲಿವೇಟ್ ಕಾರ್ಯಕ್ರಮದ ಭಾಗವಾಗಿ ಜಾರಿಗೊಳ್ಳಲಿರುವ ಈ ಉಪಕ್ರಮಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಮೂರು ವರ್ಷಗಳ ಅವಧಿಯಲ್ಲಿ ಒಟ್ಟು 25 ಕೋ.ರೂ. ವೆಚ್ಚದಲ್ಲಿ ಗರಿಷ್ಟ 100 ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲ ನೀಡಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮವನ್ನು ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ (ಕೆಐಟಿಎಸ್) ಮೂಲಕ ಜಾರಿಗೊಳಿಸಲಾಗುತ್ತದೆ.

**ಸರ್ಕಾರವೇ ಮೊದಲ ಗ್ರಾಹಕ**

ಹೊಸ ತಂತ್ರಜ್ಞಾನ ಹಾಗು ನವೀನ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಸ್ಟಾರ್ಟ್‌ಅಪ್‌ಗಳಿಗೆ ಆರಂಭಿಕ ಹಂತದಲ್ಲೇ ಮಾರುಕಟ್ಟೆ ಅವಕಾಶ ಕಲ್ಪಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ. ಸರ್ಕಾರವು ಕೇವಲ ಖರೀದಿದಾರನಾಗಿ ಕಾರ್ಯನಿರ್ವಹಿಸುವ ಬದಲು ನವೀನ ಪರಿಹಾರಗಳನ್ನು ಅಳವಡಿಸಿಕೊಳ್ಳುವ




ಮೊದಲ ಗ್ರಾಹಕ ಹಾಗು ನಾವೀನ್ಯತೆಗೆ ಸಹಭಾಗಿಯಾಗುವ ವ್ಯವಸ್ಥೆ ರೂಪಿಸಲಾಗುತ್ತಿದೆ.

ಸ್ಟಾರ್ಟ್‌ಅಪ್‌ಗಳು ಸರ್ಕಾರಿ ಇಲಾಖೆಗಳು ಗುರುತಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಸಲ್ಲಿಸಬಹುದಾಗಿದೆ. ಅದೇ ರೀತಿ ಸರ್ಕಾರದ ಅಗತ್ಯಗಳನ್ನು ಗುರುತಿಸಿ ಸ್ಟಾರ್ಟ್‌ಅಪ್‌ಗಳೇ ತಮ್ಮ ನವೀನ ಪರಿಹಾರಗಳನ್ನು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದೆ.

**ಪರೀಕ್ಷಿಸಿ ಖರೀದಿಸುವ ವ್ಯವಸ್ಥೆ**

ಗವರ್ನರ್ಮೆಂಟ್ ಫಸ್ಟ್ ಉಪಕ್ರಮದಲ್ಲಿ ಪರೀಕ್ಷೆ-ಮೌಲ್ಯಮಾಪನ-ಖರೀದಿ ಎಂಬ ವ್ಯವಸ್ಥಿತ ವಿಧಾನ ಅನುಸರಿಸಲಾಗುತ್ತದೆ. ಆಯ್ಕೆಯಾದ ಸ್ಟಾರ್ಟ್‌ಅಪ್‌ಗಳ ಪರಿಹಾರಗಳನ್ನು ಸರ್ಕಾರಿ ಇಲಾಖೆಗಳ ನೈಜ ಪರಿಸರದಲ್ಲಿ ಪ್ರಾಯೋಗಿಕವಾಗಿ ಅಳವಡಿಸಿ ಅವುಗಳ ಕಾರ್ಯಕ್ಷಮತೆ, ಪರಿಣಾಮ, ಬಳಕೆದಾರರ ಸ್ವೀಕಾರ, ವೆಚ್ಚದ ಪರಿಣಾಮಕಾರಿತ್ವ ಹಾಗು ವಿಸ್ತರಣಾ ಸಾಮರ್ಥ್ಯವನ್ನು ಪರಿಶೀಲಿಸಲಾಗುತ್ತದೆ.

ಪರೀಕ್ಷಾ ಹಂತದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಮತ್ತು ನಿರೀಕ್ಷಿತ ಫಲಿತಾಂಶ ಗಳನ್ನು ನೀಡುವ ಪರಿಹಾರಗಳನ್ನು ಮುಂದಿನ ಹಂತ ದಲ್ಲಿ ಸರ್ಕಾರಿ ಖರೀದಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಅಳವಡಿಕೆಗೆ ಪರಿಗಣಿಸಲಾಗುತ್ತದೆ.

**ಪ್ರತಿ ಸ್ಟಾರ್ಟ್‌ಅಪ್‌ಗೆ 25 ಲ.ರೂ.**

ಅರ್ಹ ಸ್ಟಾರ್ಟ್‌ಅಪ್‌ಗಳಿಗೆ ಪ್ರಾಯೋಗಿಕ ಅಳವಡಿಕೆ ಮತ್ತು ಮೌಲ್ಯಮಾಪನಕ್ಕಾಗಿ ಪ್ರತಿ ಸ್ಟಾರ್ಟ್‌ಅಪ್‌ಗೆ ಗರಿಷ್ಟ 25 ಲ. ರೂ. ವರೆಗೆ ನೆರವು ದೊರೆಯಲಿದೆ. ಒಟ್ಟು 25 ಕೋ. ರೂ. ಅನುದಾನದಲ್ಲಿ ಶೇ.95ರಷ್ಟು, ಅಂದರೆ 23.75 ಕೋ.ರೂ. ಗಳನ್ನು ಸ್ಟಾರ್ಟ್‌ಅಪ್‌ಗಳ ನೆರವಿಗೆ ಹಾಗು ಶೇ.5ರಷ್ಟು ಅಂದರೆ 1.25 ಕೋ.ರೂ. ಆಡಳಿತಾತ್ಮಕ ವೆಚ್ಚಗಳಿಗೆ ಮೀಸಲಿಡಲಾಗಿದೆ.

ಸರ್ಕಾರದ ಮಾರ್ಗಸೂಚಿಗಳ ಪ್ರಕಾರ, ಕರ್ನಾಟಕದಲ್ಲಿ ನೋಂದಾಯಿತವಾಗಿರುವ, ಸ್ಥಾಪನೆಯಾಗಿ 10 ವರ್ಷಕ್ಕಿಂತ ಕಡಿಮೆ ಅವಧಿಯ ಹಾಗು ಯಾವುದೇ ಹಣಕಾಸು ವರ್ಷದಲ್ಲಿ 200 ಕೋ.ರೂ. ಗಿಂತ ಹೆಚ್ಚಿನ ವಾರ್ಷಿಕ ವಹಿವಾಟು ಹೊಂದಿರದ ಸ್ಟಾರ್ಟ್‌ಅಪ್‌ಗಳು ಅರ್ಹತೆ ಪಡೆಯಬಹುದಾಗಿದೆ. ಪರಿಹಾರಗಳು ನವೀನತೆ, ವಿಸ್ತರಣಾ ಸಾಮರ್ಥ್ಯ ಹಾಗು ನೈಜ ಪರಿಸರ ದಲ್ಲಿ ಪರೀಕ್ಷೆಗೆ ಸಿದ್ಧವಾಗಿರುವ ತಾಂತ್ರಿಕ ಸಾಮರ್ಥ್ಯ ವನ್ನು ಹೊಂದಿರಬೇಕು. ಮಾಹಿತಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ, ಸಲಹಾ ಸೇವೆ, ವಿನ್ಯಾಸ, ಸಾಗಣೆ ವ್ಯವಸ್ಥೆ ಸೇರಿ ವಿವಿಧ ಸೇವೆಗಳು ಹಾಗು ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಈ ಉಪಕ್ರಮದ ವ್ಯಾಪ್ತಿಗೆ ತರಲಾಗಿದೆ. ಸರ್ಕಾರಿ ಇಲಾಖೆ ಗಳು ತಮ್ಮ ಸಮಸ್ಯೆ ಅಥವಾ ಅಗತ್ಯವನ್ನು ಗುರುತಿಸಿ ಸಮಸ್ಯೆ ಆಧಾರಿತ ಪ್ರಸ್ತಾವನೆ ಆಹ್ವಾನಿಸಬಹುದು.ಪ್ರತಿ ಯಾಗಿ ಸ್ಟಾರ್ಟ್ ಅಪ್‌ಗಳು ತಮ್ಮದೇಯಾದ ನವೀನ ಪರಿಹಾರಗಳನ್ನು ಸರ್ಕಾರಕ್ಕೆ ಸಲ್ಲಿಸುವ ಅವಕಾಶವೂ ಇರಲಿದೆ.

### ವಿಮಾನ ನಿಲ್ದಾಣ, ಆಸ್ಪತ್ರೆ ಕಾಮಗಾರಿ ಚುರುಕುಗೊಳಿಸಿ

» ಮೊದಲನೇ ಪುಟದಿಂದ

ಸೂಚನೆ ನೀಡಿದ ಅವರು, ಬಡವರು ಹಾಗು ಸಾರ್ವಜನಿಕರಿಗೆ ಉನ್ನತ ಮಟ್ಟದ ವೈದ್ಯಕೀಯ ಸೇವೆ ದೊರೆಯುವುದು ಸರ್ಕಾರದ ಕರ್ತವ್ಯ. ಹೃದ್ರೋಗ, ನರವಿಜ್ಞಾನ ಸೇರಿ ವಿಶೇಷ ಚಿಕಿತ್ಸೆಗಳು ಜಿಲ್ಲೆಯಲ್ಲಿ ಶೀಘ್ರ ಲಭ್ಯವಾಗುವಂತಾಗಬೇಕು. ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಜನರಿಗೆ ತುರ್ತು ಆರೋಗ್ಯ ಸೇವೆ ಒದಗಿಸಲು ಆಸ್ಪತ್ರೆಯನ್ನು ಸಜ್ಜುಗೊಳಿಸಬೇಕೆಂದು ನಿರ್ದೇಶನ ನೀಡಿದರು.

**ಸಿಎಸ್‌ಆರ್ ನಿಧಿ ದುರ್ಬಳಕೆಯಾಗದಿರಲಿ**

ವಿಕಾಸಸೌಧದಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಹಾಸನ ಜಿಲ್ಲೆಯಲ್ಲಿ ಸಿಎಸ್‌ಆರ್ ನಿಧಿಯಡಿ ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಡಿಸ್ಟಿಲರಿ ಮಾಲೀಕರೊಂದಿಗೆ ಚರ್ಚೆ ನಡೆಯಿತು. ಸಿಎಸ್‌ಆರ್ ನಿಧಿ ದುರ್ಬಳಕೆಯಾಗದಂತೆ ನಿಗಾ ವಹಿಸಬೇಕು. ನಿಧಿಯನ್ನು ಕ್ಷೇತ್ರದ ಅಗತ್ಯಗಳಿಗೆ ಅನುಗುಣವಾಗಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಮರ್ಪಕವಾಗಿ ಬಳಸಬೇಕೆಂದು ಸೂಚನೆ ನೀಡಿದರು.

# ಗಾರ್ಮೆಂಟ್ ಕಾರ್ಮಿಕರ ವೇತನ, ಇಪಿಎಫ್ ಸಮಸ್ಯೆ ಪರಿಹರಿಸಿ

## ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಗೆ ಶ್ರೇಯಸ್ ಪಟೇಲ್ ಕೋರಿಕೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಗಾರ್ಮೆಂಟ್, ವಸ್ತ್ರ ಹಾಗು ಟೈಲರಿಂಗ್ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಕನಿಷ್ಠ ವೇತನ, ತುಟ್ಟಿ ಭತ್ಯೆ ಮತ್ತು ಇಪಿಎಫ್/ಇಪಿಎಸ್ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಸಲ್ಲಿಸಿದ್ದಾರೆ.




ಕಾರ್ಮಿಕರ ಅಹವಾಲುಗಳು ಹಾಗು ಸಂಬಂಧಿತ ವರದಿಯನ್ನು ಸಚಿವರಿಗೆ ಸಲ್ಲಿಸಿರುವ ಅವರು, ಕರ್ನಾಟಕ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಗಾರ್ಮೆಂಟ್ ಸಂಸ್ಥೆಗಳಿಗೆ ಅನ್ವಯಿಸುವ ಕನಿಷ್ಠ ವೇತನ ಮತ್ತು ತುಟ್ಟಿ ಭತ್ಯೆಯನ್ನು ಪರಿಶೀಲಿಸುವಂತೆ ಕೋರಿ, ಪರಿಶೀಲನಾ ಪ್ರಕ್ರಿಯೆಯಲ್ಲಿ ಕಾರ್ಮಿಕರು ಹಾಗು ಉದ್ಯೋಗದಾತರ ಪ್ರತಿನಿಧಿಗಳನ್ನು ಒಳಗೊಳ್ಳುವಂತೆಯೂ ಮನವಿ ಮಾಡಿದ್ದಾರೆ.

ಜಿಲ್ಲೆಯಲ್ಲಿರುವ ಸಂಬಂಧಿತ ಸಂಸ್ಥೆಗಳು ಪ್ರಸ್ತುತ ಅಧಿಸೂಚಿತ ಕನಿಷ್ಠ ವೇತನವನ್ನು ಪಾವತಿಸುವಂತೆ ಹಾಗು ಕಡ್ಡಾಯ ಇಪಿಎಫ್ ಕೊಡುಗೆಗಳನ್ನು ಸಮರ್ಪಕವಾಗಿ ಜಮಾ ಮಾಡುತ್ತಿವೆಯೇ ಎಂಬುದನ್ನು ಅಧಿಕಾರಿಗಳ ಮೂಲಕ ಪರಿಶೀಲಿಸಬೇಕು. ಕಾರ್ಮಿಕರಿಗೆ ತಮ್ಮ ಯುಎಎನ್ ಮತ್ತು ಸೇವಾ ದಾಖಲೆಗಳನ್ನು ಪರಿಶೀಲಿಸಲು ಹಾಗು ಬಾಕಿ ಕೊಡುಗೆ, ವರ್ಗಾವಣೆ ಮತ್ತು ಇತ್ಯರ್ಥಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಸನದಲ್ಲಿ ಇಪಿಎಫ್‌ಒ ವತಿಯಿಂದ ಕುಂದುಕೊರತೆ ಮತ್ತು ಹಕ್ಕು ಪಾವತಿ ನೆರವು ಶಿಬಿರ ಆಯೋಜಿಸಬೇಕೆಂದು ಮನವಿ ಮಾಡಿದ್ದಾರೆ.

ಉದ್ಯೋಗ ವ್ಯತ್ಯಯದಿಂದ ಸಂಕಷ್ಟಕ್ಕೀಡಾಗಿರುವ ಕಾರ್ಮಿಕರು ಎದುರಿಸುತ್ತಿರುವ ಇಪಿಎಫ್ ಯೋಜನೆಯ ಪ್ಯಾರಾ 49(2) ಹಾಗು ಇಪಿಎಸ್ ಪ್ಯಾರಾ 13ಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಿ, ಕಾನೂನಿನ ವ್ಯಾಪ್ತಿಯಲ್ಲಿ ಸೂಕ್ತ ಪರಿಹಾರ ಅಥವಾ ವಿಶೇಷ ವ್ಯವಸ್ಥೆ ಕಲ್ಪಿಸುವ ಸಾಧ್ಯತೆಯನ್ನು ಪರಿಗಣಿಸುವಂತೆ ಕಾರ್ಮಿಕರ ಪ್ರತಿನಿಧಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಭೇಟಿಯಾಗಿ, ಕೈಗೊಂಡ ಕ್ರಮಗಳ ಕುರಿತು ಲಿಖಿತ ಉತ್ತರ ನೀಡುವಂತೆ ಮನವಿ ಮಾಡಿರುವ ಅವರು, ಕಾರ್ಮಿಕರ ಕುಟುಂಬಗಳ ಜೀವನೋಪಾಯಕ್ಕೆ ವೇತನ ಹಾಗು ಶಾಸನಬದ್ಧ ಸೌಲಭ್ಯಗಳು ಪ್ರಮುಖ ಆಧಾರವಾಗಿರುವುದರಿಂದ, ಈ ವಿಷಯದಲ್ಲಿ ತುರ್ತಾಗಿ ಮಧ್ಯಪ್ರವೇಶಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

## ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ವ್ಯಾನಿಟಿ ಬ್ಯಾಗ್‌ನಲ್ಲಿಟ್ಟಿದ್ದ ಅಂದಾಜು 85 ಸಾವಿರ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿರುವ ಘಟನೆ ಬಿಕ್ಕೋಡು ಹೋಬಳಿ ಸೋಮನಹಳ್ಳಿಯಲ್ಲಿ ನಡೆದಿದೆ.

ಚಿಕ್ಕಮಗಳೂರು ತಾಲ್ಲೂಕು ಎಡೆಕನ್ನಿ ಗ್ರಾಮದ ಲಕ್ಷ್ಮಿ ಎಂಬುವವರಿಗೆ ಸೇರಿದ 14 ಗ್ರಾಂ ತೂಕದ ಚಿನ್ನದ ಕೊರಳ ಸರ, 2 ಗ್ರಾಂನ ಡೈಮೆಂಡ್ ಮಿಶ್ರಿತ ಚಿನ್ನದ ಉಂಗುರ, 1 ಜೊತೆ ಬೆಳ್ಳಿ ಕಾಲು ಚೈನ್ ಹಾಗು 3500 ರೂ. ನಗದು ಕಳುವಾಗಿದೆ. ಬೆಂಗಳೂರಿನ ರೆಹಜಾ ರೆಸಿಡೆನ್ಸಿಯಲ್ಲಿ ಹೋಂ ನರ್ಸ್ ಆಗಿ ಕೆಲಸ ಮಾಡಿಕೊಂಡಿರುವ ಲಕ್ಷ್ಮಿ ಆ.29 ರಂದು ಸೋಮನ ಹಳ್ಳಿಯ ಸಂಬಂಧಿಕರ ಮನೆಗೆ ಬಂದಿದ್ದರು. ಅದೇ ದಿನ ತಮ್ಮ ಊರಿಗೆ ತೆರಳಿದ್ದರು. ಮಾರನೇ ದಿನ ಬ್ಯಾಗ್ ನೋಡಿದಾಗ ಚಿನ್ನಾಭರಣ ನಾಪತ್ತೆಯಾಗಿರುವುದು ತಿಳಿದಿದೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮೂರು ದೇವಾಲಯದಲ್ಲಿ ಕಳವು

• ಪ್ರಜೋದಯ ವರದಿ

**ಅರಕಲಗೂಡು:** ಒಂದೇ ದಿನ ಮೂರು ದೇವಸ್ಥಾನಗಳ ಹುಂಡಿ ಒಡೆದಿರುವ ಕಳ್ಳರು ಅಂದಾಜು 50 ಸಾವಿರ ರೂ. ಕದ್ದಿರುವ ಘಟನೆ ತಾಲ್ಲೂಕಿನ ಕೇರಳಾಪುರ ಗ್ರಾಮದಲ್ಲಿ ನಡೆದಿದೆ.

ಲಕ್ಷ್ಮಿದೇವಿ-ಚನ್ನಕೇಶವ ದೇವಸ್ಥಾನ, ಮೈಲಾರಲಿಂಗೇಶ್ವರ ಹಾಗು ರಾಜರಾಜೇಶ್ವರಿ ದೇವಸ್ಥಾನಗಳಲ್ಲಿ ಸೆ.25ರ ರಾತ್ರಿ ಕಳುವಾಗಿದೆ. ದೇವಸ್ಥಾನದ ಬೀಗವನ್ನು ಯಾವುದೋ ಆಯುಧದಿಂದ ಮೀಟಿ ಮುರಿದು ಒಳನುಗ್ಗಿರುವ ಕಳ್ಳರು ಹುಂಡಿ ಹಣ ಎಗರಿಸಿದ್ದಾರೆ. ಹುಂಡಿಯಲ್ಲಿದ್ದ ಹಣ ಹಾಗು ಚಿನ್ನ, ಬೆಳ್ಳಿಯ ಕಾಣಿಕೆಗಳನ್ನು ಕಳ್ಳತನ ಮಾಡಿದ್ದಾರೆ ಎನ್ನಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕುಡಿಯುವ ನೀರು ಪೂರೈಕೆ ಕಾಮಗಾರಿಗೆ ಚಾಲನೆ



**ಹಾಸನ:** ನಗರದ ವಿಶ್ವೇಶ್ವರಯ್ಯ ಬಡಾವಣೆ ಮೊದಲ ಹಂತ, ರಾಯಲ್ ಅಪೋಲೋ ಶಾಲೆ ಸುತ್ತಮುತ್ತಲಿನ ಪ್ರದೇಶ, ದಾಸರಕೊಪ್ಪಲು 2ನೇ ಹಂತ ಹಾಗು ಮಾವಿನಹಳ್ಳಿ ಪ್ರದೇಶ ಗಳಿಗೆ ಹೇಮಾವತಿ ಕುಡಿಯುವ ನೀರು ಪೂರೈಸುವ ಕೊಳವೆ ಮಾರ್ಗ ಅಳವಡಿಕೆ ಹಾಗು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಚಾಲನೆ ನೀಡಿದರು.

ಸ್ಥಳೀಯರ ಬಹುದಿನಗಳ ಬೇಡಿಕೆ ಹಾಗು ಪ್ರದೇಶದಲ್ಲಿ ಕುಡಿಯುವ ನೀರು ಮತ್ತು ರಸ್ತೆ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಲವು ದೂರುಗಳು ಕೇಳಿಬಂದ ಹಿನ್ನಲೆ ಮಹಾನಗರ ಪಾಲಿಕೆಯ ಅನುದಾನದಡಿ 50 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸ ಲಾಯಿತು.

ಈ ವೇಳೆ ಮಾತನಾಡಿದ ಶಾಸಕರು, ಕಾಮಗಾರಿಯನ್ನು ಗುಣಮಟ್ಟದಲ್ಲಿ ಕೈಗೊಂಡು ಆದಷ್ಟು ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಕಾಮಗಾರಿ ವೇಳೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕೆಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಉಪಸ್ಥಿತರಿದ್ದರು.

# 5 ದಿನಗಳಿಂದ ಆಧಾರ್ ಸೇವೆ ಸ್ಥಗಿತ: ಸಾರ್ವಜನಿಕರಿಗೆ ತೊಂದರೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದಲ್ಲಿ ಕಳೆದ ಐದು ದಿನಗಳಿಂದ ಆಧಾರ್ ನೋಂದಣಿ ಹಾಗೂ ನವೀಕರಣ ಸೇವೆಗಳು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಅಂಚೆ ಕಚೇರಿ, ಎಸ್‌ಬಿಐ ಹಾಗೂ ಬಿಎಸ್‌ಎನ್‌ಎಲ್ ಕಚೇರಿಗಳಲ್ಲಿ ಸೇವೆ ಲಭ್ಯವಿಲ್ಲದ ಹಿನ್ನಲೆಯಲ್ಲಿ ಆಧಾರ್ ತಿದ್ದುಪಡಿ ಹಾಗೂ ನವೀಕರಣಕ್ಕಾಗಿ ಜನರು ಪರದಾಡುವಂತಾಗಿದೆ.




ಹೆಸರು, ವಿಳಾಸ, ಜನ್ಮದಿನಾಂಕ, ಲಿಂಗ, ಮೊಬೈಲ್ ಸಂಖ್ಯೆ ಸೇರಿ ಜನಸಾಂಖ್ಯಿಕ ವಿವರಗಳ ತಿದ್ದುಪಡಿ ಹಾಗೂ ಫೋಟೋ, ಬೆರಳಚ್ಚು ಮತ್ತು ಐರಿಸ್ ಸೇರಿ ಬಯೋಮೆಟ್ರಿಕ್ ವಿವರಗಳ ನವೀಕರಣಕ್ಕೆ ಜನರು ಪರದಾಡುವಂತಾಗಿದೆ. ಅಂಚೆ ಕಚೇರಿಯಲ್ಲಿ ತಾಂತ್ರಿಕ ದೋಷದ ಹಿನ್ನಲೆಯಲ್ಲಿ 15 ದಿನಗಳ ಕಾಲ ಆಧಾರ್ ಸೇವೆಗಳು ಲಭ್ಯವಿರುವುದಿಲ್ಲವೆಂಬ ಸೂಚನಾ ಫಲಕ ಹಾಕಲಾಗಿದೆ. ಎಸ್‌ಬಿಐ ಹಾಗೂ ಬಿಎಸ್‌ಎನ್‌ಎಲ್ ಕಚೇರಿಗಳಲ್ಲಿಯೂ ಸೇವೆ ಸ್ಥಗಿತಗೊಂಡಿದೆ ಎನ್ನಲಾಗಿದೆ.

ಆಧಾರ್ ಕಾರ್ಡ್ ವಿವಿಧ ಸರ್ಕಾರಿ ಸೌಲಭ್ಯಗಳು, ಪಿಂಚಣಿ, ಪಡಿತರ ಚೀಟಿ, ಗೃಹಲಕ್ಷ್ಮಿ ಸೇರಿ ಹಲವು ಸೇವೆಗಳಿಗೆ ಅಗತ್ಯವಾಗಿರುವುದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗಿದೆ. ತುರ್ತು ಅಗತ್ಯವಿರುವವರು ಜಿಲ್ಲಾ ಕೇಂದ್ರ ಹಾಸನಕ್ಕೆ ತೆರಳಬೇಕಾದ ಪರಿಸ್ಥಿತಿ ಎದುರಾಗಿದ್ದು, ಅದರಿಂದ ಸಮಯ ಹಾಗೂ ಹಣ ವ್ಯಯವಾಗುತ್ತಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಂದ ಬರುವ ವೃದ್ಧರು, ವಿದ್ಯಾರ್ಥಿಗಳು ಹಾಗೂ ಕೂಲಿ ಕಾರ್ಮಿಕರು ತೊಂದರೆ ಅನುಭವಿಸುವಂತಾಗಿದೆ.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಆಧಾರ್ ಸೇವೆ ಸ್ಥಗಿತಗೊಂಡಿರುವ ಕುರಿತು ಮಾಹಿತಿ ದೊರೆತಿದ್ದು, ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆ ಪರಿಹರಿಸುವಂತೆ ಸೂಚಿಸಲಾಗುವುದು. ಆಧಾರ್ ಸೇವೆ ಲಭ್ಯವಿಲ್ಲದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುವುದಲ್ಲದೆ, ಅವರಿಗೆ ದೊರೆಯಬೇಕಾದ ಸೌಲಭ್ಯಗಳೂ ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಆದಷ್ಟು ಬೇಗ ಸಮಸ್ಯೆ ಬಗೆಹರಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸಲು ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ.

ಮಾನವ ಹಕ್ಕುಗಳ ಆಯೋಗದ ತಾಲ್ಲೂಕು ಕಾರ್ಯದರ್ಶಿ ಆನೆಮಹಲ್ ಹನೀಫ್ ಮಾತನಾಡಿ, ಸಕಲೇಶಪುರ ತಾಲ್ಲೂಕಿನಲ್ಲಿ ಆಧಾರ್ ಸೇವೆಗೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆ ಎದುರಾಗಿದೆ. ತಾಲ್ಲೂಕು ಕಚೇರಿಯಲ್ಲಿಯೂ ಆಧಾರ್ ಕೇಂದ್ರ ಇಲ್ಲ. ಅಂಚೆ ಕಚೇರಿಗೆ ತೆರಳಿದರೆ ಸರ್ವರ್ ಸಮಸ್ಯೆ, ಎಸ್‌ಬಿಐ ಹಾಗೂ ಬಿಎಸ್‌ಎನ್‌ಎಲ್ ಕಚೇರಿಗಳಲ್ಲಿಯೂ ಈ ಸಮಸ್ಯೆ ಎದುರಾಗುತ್ತಿದೆ. ಅದರಿಂದ ಗ್ರಾಮೀಣ ಪ್ರದೇಶಗಳಿಂದ ಬರುವ ಸಾರ್ವಜನಿಕರು ಒಂದು ಸಣ್ಣ ತಿದ್ದುಪಡಿಗಾಗಿ ಹಲವು ಕಚೇರಿಗಳಿಗೆ ಅಲೆದಾಡುವಂತಾಗಿದೆ ಎಂದು ಹೇಳಿದರು.

ಗೃಹಲಕ್ಷ್ಮಿ ಸೇರಿ ವಿವಿಧ ಸರ್ಕಾರಿ ಸೇವೆಗಳಿಗೆ ಆಧಾರ್ ಅಗತ್ಯವಾಗಿದ್ದು, ಶಾಲಾ ಮಕ್ಕಳು, ವೃದ್ಧರು ಸೇರಿ ಎಲ್ಲಾ ವರ್ಗದವರಿಗೂ ಆಧಾರ್ ನವೀಕರಣ ಹಾಗೂ ತಿದ್ದುಪಡಿ ಅಗತ್ಯವಿದೆ. ಸಕಲೇಶಪುರದ ಮಿನಿ ವಿಧಾನಸೌಧದಲ್ಲಿಯೇ ಆಧಾರ್ ಸೇವೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಆದಷ್ಟು ಬೇಗ ಸಮಸ್ಯೆ ಪರಿಹರಿಸಬೇಕೆಂದು ಒತ್ತಾಯಿಸಿದರು.

### 84 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನ ಬೆಳೆಗೆ ಬರದ ಬರೆ

» ಮೊದಲನೇ ಪುಟದಿಂದ

ಅದೇ ಜಾಗದಲ್ಲಿ ಹೊಸ ತೆಂಗಿನ ಗಿಡ ಬೆಳೆಸಿ ಫಸಲು ಪಡೆಯಲು ಕನಿಷ್ಠ ಎಂಟರಿಂದ ಹತ್ತು ವರ್ಷಗಳ ಕಾಲ ಕಾಯಬೇಕಾಗುತ್ತದೆ. ಹೀಗಾಗಿ ಆರ್ಥಿಕ ನಷ್ಟದ ಜೊತೆಗೆ ಭವಿಷ್ಯದ ಆದಾಯಕ್ಕೂ ಹೊಡೆತ ನೀಡುತ್ತಿದೆ.

**ನೆರವಿನ ನಿರೀಕ್ಷೆಯಲ್ಲಿ ಬೆಳೆಗಾರರು**

ಒಂದೆಡೆ ಬರ, ಮತ್ತೊಂದೆಡೆ ರೋಗ-ಕೀಟಬಾಧೆ ಇದರ ನಡುವೆ ತೆಂಗಿನ ಬೆಲೆ ಏರಿಕೆಯಿಂದ ಗ್ರಾಹಕರ ಮೇಲೂ ಹೊರೆ ಹೆಚ್ಚಾಗಿದೆ. ದೀರ್ಘಾವಧಿಯ ಬೆಳೆ ಆಗಿರುವುದರಿಂದ ತೆಂಗು ಬೆಳೆಗಾರರಿಗೆ ತಕ್ಷಣದ ಪರಿಹಾರದ ಜೊತೆಗೆ ಮರಗಳ ಸಂರಕ್ಷಣೆ, ರೋಗ ನಿಯಂತ್ರಣ ಹಾಗು ಹಾನಿಗೊಳಗಾದ ತೋಟಗಳ ಪುನಶ್ಚೇತನಕ್ಕೆ ದೀರ್ಘಾವಧಿಯ ಯೋಜನೆ ಅಗತ್ಯವಾಗಿದೆ.

ಜಿಲ್ಲೆಯಲ್ಲಿ 84 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದ ತೆಂಗು ಬೆಳೆ ಹಾನಿಯಾಗಿರುವ ಹಿನ್ನಲೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿ, ಹಾನಿಗೊಳಗಾದ ಬೆಳೆಗಾರರಿಗೆ ಪರಿಹಾರ ಒದಗಿಸುವುದರ ಜೊತೆಗೆ ರೋಗ ನಿಯಂತ್ರಣಕ್ಕೆ ಅಗತ್ಯ ತಾಂತ್ರಿಕ ನೆರವು, ಔಷಧಿ ಹಾಗು ತೋಟ ಪುನಶ್ಚೇತನಕ್ಕೆ ಸಹಾಯ ನೀಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

## ನಗರದಲ್ಲಿ ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ




• ಪ್ರಜೋದಯ ವರದಿ

**ಹಾಸನ:** ದೇಶ-ವಿದೇಶಗಳ ವೈವಿಧ್ಯಮಯ ಉತ್ಪನ್ನಗಳನ್ನು ಒಂದೇ ಸ್ಥಳದಲ್ಲಿ ಪರಿಚಯಿಸುವ ಉದ್ದೇಶದಿಂದ ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಅಂತಾರಾಷ್ಟ್ರೀಯ ಇಂಡೋ -ಥಾಯ್ಲೆಂಡ್ ಎಕ್ಸ್ ಪೋ ಆಯೋಜಿಸಲಾಗಿದೆ.

ಅ.5ರ ವರೆಗೆ ಬೆಳಿಗ್ಗೆ 11 ರಿಂದ ರಾತ್ರಿ 9ರ ವರೆಗೆ ಪ್ರದರ್ಶನ ನಡೆಯಲಿದೆ. ಸೆರಾಮಿಕ್ ವಸ್ತುಗಳು, ಪಂಜಾಬಿ ಸ್ಯಾಂಡಲ್ಸ್, ವಿವಿಧ ವಿನ್ಯಾಸದ ಸೀರೆಗಳು, ಪರ್ಸ್, ಕುರ್ತಿ, ಸೋಫಾ, ಶೂ ರ್‍ಯಾಕ್, ಜೈಪುರ ಬೆಡ್‌ಶೀಟ್‌ಗಳು ಹಾಗು ಆಭರಣ ಸೇರಿ ಹಲವು ಉತ್ಪನ್ನಗಳು ಲಭ್ಯವಿದೆ. ಬಾಲಿ ವಿಶೇಷ ಉತ್ಪನ್ನಗಳು, ಮಸಾಜ್ ಚೇರ್, ವಾಕರ್ ಸೇರಿ ವಿವಿಧ ವಸ್ತುಗಳನ್ನೂ ಖರೀದಿಸಬಹುದಾಗಿದೆ. ಮಕ್ಕಳ ಮನರಂಜನೆಗೆ ಸಂಬಂಧಿಸಿದ ವ್ಯವಸ್ಥೆಯನ್ನೂ ಮಾಡಲಾಗಿದೆ.

ಹಳೆಯ ಸೋಫಾಗಳನ್ನು ವಿನಿಮಯ ಮಾಡಿಕೊಂಡು ಹೊಸ ಸೋಫಾಗಳ ಖರೀದಿಗೆ ಶೇ.70ರ ವರೆಗೆ ರಿಯಾಯಿತಿ ಪಡೆಯುವ ಅವಕಾಶವಿದೆ ಎಂದು ಆಯೋಜಕರು ಹೇಳಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ನಂ. 9742244688 ಇಲ್ಲಿಗೆ ಸಂಪರ್ಕಿಸಬಹುದು.

# ಪೌರಕಾರ್ಮಿಕರ ಸೇವೆ ಸಮಾಜಕ್ಕೆ ಅಮೂಲ್ಯ

• ಪ್ರಜೋದಯ ವರದಿ

**ಆಲೂರು:** ರೈತರು, ಕೂಲಿ ಕಾರ್ಮಿಕರು, ಶ್ರಮಿಕರು ಹಾಗೂ ಪೌರಕಾರ್ಮಿಕರ ಪರಿಶ್ರಮದ ಮೇಲೆ ಇಡೀ ದೇಶ ನಿಂತಿದೆ. ಸಮಾಜದ ಸ್ವಚ್ಛತೆ ಹಾಗೂ ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಪೌರಕಾರ್ಮಿಕರನ್ನು ಗೌರವಿಸುತ್ತಿರುವುದು ನಿಜಕ್ಕೂ ಸಂತೋಷದ ವಿಚಾರ ಎಂದು ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಅವರು ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ರಾಜಮ್ಮ ಜನಸ್ಪಂದನ ವೇದಿಕೆ ವತಿಯಿಂದ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ, ಬಾಗಿನ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಶತಮಾನಗಳಿಂದ ತಳ ಸಮುದಾಯಗಳನ್ನು ಶೋಷಣೆಗೆ ಒಳಪಡಿಸಲಾಗಿದ್ದು, ಶಿಕ್ಷಣ ಮತ್ತು ಅಧಿಕಾರದಿಂದ ದೂರವಿಡಲಾಗಿದೆ. ಮೇಲ್ವರ್ಗದ ಜನರು ಶಿಕ್ಷಣದ ಜೊತೆಗೆ ಅಧಿಕಾರದಲ್ಲಿಯೂ ಹೆಚ್ಚಿನ ಅವಕಾಶ ಪಡೆದುಕೊಂಡಿದ್ದಾರೆ. ಇಂತಹ ಅಸಮಾನತೆಗಳು ದೂರವಾಗಿ, ಪೌರಕಾರ್ಮಿಕರು, ಕೂಲಿ ಕಾರ್ಮಿಕರು ಹಾಗೂ ರೈತಾಪಿ ವರ್ಗದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆದು ಉನ್ನತ ಸ್ಥಾನಮಾನ ಅಲಂಕರಿಸಬೇಕೆಂದು ಆಶಿಸಿದರು.



ಪೌರಕಾರ್ಮಿಕರು ಸೇರಿ ಸಮಾಜದ ತಳಮಟ್ಟದ ಜನರಲ್ಲಿ ಅನೇಕರು ಸ್ವಂತ ಮನೆ ಹಾಗೂ ಜಮೀನು ಹೊಂದಲು ಸಾಧ್ಯವಾಗದೆ. ದುಡಿಮೆಯನ್ನೇ ಅವಲಂಬಿಸಿ ಜೀವನ ಸಾಗಿಸುವ ಪರಿಸ್ಥಿತಿಯಲ್ಲಿದ್ದಾರೆ. ಇಂತಹ ಸಾಮಾಜಿಕ ಅಸಮಾನತೆಗಳಿಗೆ ಶೋಷಣೆಯ ವ್ಯವಸ್ಥೆಯೇ ಕಾರಣವಾಗಿದೆ. ಪ್ರತಿನಿತ್ಯ ಪಟ್ಟಣದ ರಸ್ತೆಗಳು, ಬಡಾವಣೆಗಳು ಹಾಗೂ ಸಾರ್ವಜನಿಕ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಪೌರಕಾರ್ಮಿಕರ ಸೇವೆ ಮಹತ್ವದ್ದಾಗಿದೆ. ಅವರ ಶ್ರಮವನ್ನು ಗುರುತಿಸುವುದರ ಜೊತೆಗೆ, ಅವರ ಕಷ್ಟ-ಸುಖಗಳಿಗೆ ಸ್ಪಂದಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿನಾಕಲಗೂಡು ಅವರು ಮಾತನಾಡಿ, ಪ್ರತಿನಿತ್ಯ ನಗರವನ್ನು ಸ್ವಚ್ಛವಾಗಿಡುವ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವ ಪೌರಕಾರ್ಮಿಕರ ಕಾರ್ಯ ಶ್ಲಾಘನೀಯ. ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಸಮಾಜದ ಆರೋಗ್ಯಕ್ಕಾಗಿ ದುಡಿಯುವ ಕಾರ್ಮಿಕರನ್ನು ಗೌರವಿಸುವ ಕೆಲಸ ವನ್ನು ಜನಸ್ಪಂದನ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಹೇಮಂತ್ ಕುಮಾರ್ ಮಾಡುತ್ತಿರುವುದು ಇತರೆ ಸಂಘ- ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದರು.

ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣೇಗೌಡ ಅವರು ಮಾತನಾಡಿ, ಪೌರಕಾರ್ಮಿಕರಿಗೆ ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಕೆಲಸ ಕಾರ್ಯಗಳಿದ್ದರೆ ತಮ್ಮಿಂದ ಸಾಧ್ಯವಾದ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಅವರು ಮಾತನಾಡಿ, ಪೌರಕಾರ್ಮಿಕರು ಒಂದು ದಿನ ಕೆಲಸ ಮಾಡದಿದ್ದರೂ ಇಡೀ ಪಟ್ಟಣದ ಸ್ವಚ್ಛತೆಯ ಮೇಲೆ ಅದರ ಪರಿಣಾಮ ಗೋಚರಿಸುತ್ತದೆ. ನಗರವನ್ನು ಸ್ವಚ್ಛವಾಗಿಟ್ಟು, ಜನರು ಆರೋಗ್ಯಕರ ವಾತಾವರಣದಲ್ಲಿ ಬದುಕಲು ಕಾರಣವಾಗುವ ಪೌರಕಾರ್ಮಿಕರ ಸೇವೆ ಅನನ್ಯವೆಂದರು.

ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಮಹಿಳಾ ಪೌರಕಾರ್ಮಿಕರಿಗೆ ಬಾಗಿನ ವಿತರಿಸುವ ಮೂಲಕ ಅವರ ಸೇವೆಗೆ ಕೃತಜ್ಞತೆ ಸಲ್ಲಿಸಲಾಯಿತು.

ಜನಸ್ಪಂದನ ವೇದಿಕೆ ಅಧ್ಯಕ್ಷ ಹೇಮಂತ್ ಕುಮಾರ್, ವೀರಶೈವ ಸಮಾಜದ ಮುಖಂಡ ರೇಣುಕಾ ಪ್ರಸಾದ್, ಕದಾಳು ಲೋಕೇಶ್, ರುದ್ರೇಗೌಡ, ಸಂದೇಶ್, ಧರಣೀಂದ್ರ, ಲೋಕೇಶ್, ಶ್ರೀಕಾಂತ್, ರಾಜಶೇಖರ್, ಮಲ್ಲೇಶ್ ಇತರರು ಉಪಸ್ಥಿತರಿದ್ದರು.

## ದಸರಾ ಕ್ರೀಡಾಕೂಟ: ಕಂಚು ಗೆದ್ದ ಭೂಮಿಕಾ ತಗಡೂರು

• ಪ್ರಜೋದಯ ವರದಿ



**ಬೆಂಗಳೂರು:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಯೋಜಿಸಿದ್ದ 2026-27ನೇ ಸಾಲಿನ ದಸರಾ ಕ್ರೀಡಾಕೂಟದಲ್ಲಿ ಡಬಲ್ಸ್ ಲಾನ್ ಟೆನ್ನಿಸ್ ಮಹಿಳಾ ವಿಭಾಗದಲ್ಲಿ ಭೂಮಿಕಾ ಎಸ್. ತಗಡೂರು ಮತ್ತು ದೇವಿಕಾ ಅವರ ಜೋಡಿ ಕಂಚಿನ ಪದಕ ಗೆದ್ದಿದೆ.

ಬೆಂಗಳೂರಿನ ಜೈನ್ ಕಾಲೇಜಿನ ವಿದ್ಯಾರ್ಥಿನಿಯಾಗಿರುವ ಭೂಮಿಕಾ ತಗಡೂರು, ಈ ಹಿಂದೆ ನೆಟ್‌ಬಾಲ್ ಕ್ರೀಡೆಯಲ್ಲಿ ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ. ರಾಜ್ಯಮಟ್ಟದ ನೆಟ್‌ಬಾಲ್ ಕ್ರೀಡಾಕೂಟದಲ್ಲಿ ಐದು ಬಾರಿ ಚಾಂಪಿಯನ್ ಆಗಿರುವ ಅವರು, ಎರಡು ಬಾರಿ ಬೆಸ್ಟ್ ಆಲ್‌ರೌಂಡರ್ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ರಾಷ್ಟ್ರ ಮಟ್ಟದ ನೆಟ್‌ಬಾಲ್ ಕ್ರೀಡಾಕೂಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿರುವ ಭೂಮಿಕಾ ಅವರು ಎರಡು ಬಾರಿ ಕಂಚಿನ ಪದಕ ಗೆದ್ದಿದ್ದಾರೆ. ಈ ಸಾಧನೆಗಾಗಿ ಕರ್ನಾಟಕ ಸರ್ಕಾರದ ವತಿಯಿಂದ ಅಂದಿನ ಮುಖ್ಯಮಂತ್ರಿ ಅವರಿಂದ ಸನ್ಮಾನಕ್ಕೂ ಪಾತ್ರರಾಗಿದ್ದರು.

## ಅ.2ರಂದು ಸರ್ಕಾರಿ ನೌಕರರ ಸದಸ್ಯರ ಸಮಾಗಮ

» ಮೊದಲನೇ ಪುಟದಿಂದ

ಭವನದಲ್ಲಿ ಅ.2ರಂದು ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಶ್ರೀ ಶಂಭುನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಸಂಸದ ಶ್ರೇಯಸ್ ಪಟೇಲ್ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಉಪಸ್ಥಿತರಿರುವರೆಂದು ಹೇಳಿದರು.

ಸದಸ್ಯರ ಸಮಾಗಮದ ಅಂಗವಾಗಿ ಉಚಿತ ಆರೋಗ್ಯ ಶಿಬಿರವ ಆಯೋಜಿಸಲಾಗಿದೆ. ಚಲನಚಿತ್ರ ನಟ ಸೃಜನ್ ಲೋಕೇಶ್, ಜಾನಪದ ಕಲಾವಿದ ಶಿವಾರ ಉಮೇಶ್ ಅವರಿಂದ ಸಂಗೀತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಶಂಭುಗೌಡ ಅವರನ್ನು ಸನ್ಮಾನಿಸಲಾಗುವುದು ಎಂದರು. ಎನ್.ಪರಮೇಶ್, ಜಿ.ಡಿ.ವಿಶ್ವನಾಥ್, ಡಿ.ಸುರೇಶ್, ಆರ್.ಯತೀಶ್, ಎನ್.ಎಸ್.ಲೋಕೇಶ್, ಗೋಪಾಲಕೃಷ್ಣ ಇದ್ದರು.

## ಅನಧಿಕೃತ ಮಾಂಸ ಮಾರಾಟ: ಕ್ರಮಕ್ಕೆ ನಿವಾಸಿಗಳ ಮನವಿ

• ಪ್ರಜೋದಯ ವರದಿ



ಸಕಲೇಶಪುರ: ಪಟ್ಟಣದ ಸರಸ್ವತಿಪುರಂ ಬಡಾವಣೆಯ ಮಳಲಿ ಬಡಾವಣೆಯಲ್ಲಿ ಅನಧಿಕೃತವಾಗಿ ಕುರಿಗಳನ್ನು ಕಡಿದು ಮಾಂಸ ಮಾರಾಟ ಮಾಡಲಾಗುತ್ತಿದೆಂದು ಆರೋಪಿಸಿ ಬಡಾವಣೆ ನಿವಾಸಿಗಳು ನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮಳಲಿ ಬಡಾವಣೆಯಲ್ಲಿ ಬನ್ನೂರು ಮಟನ್ ಸ್ಟಾಲ್ ನಡೆಸುತ್ತಿರುವ ಆಸಿಫ್ ಎಂಬುವವರು ಕುರಿಗಳನ್ನು ತಂದು ಸ್ಥಳದಲ್ಲೇ ಕಡಿದು ಮಾಂಸ ಮಾರಾಟ ಮಾಡುತ್ತಿದ್ದಾರೆ. ಅದಕ್ಕೆ ಅಗತ್ಯ ಪರವಾನಗಿ ಪಡೆದಿರುವ ಬಗ್ಗೆ ಅನುಮಾನವಿದ್ದು, ಪರಿಶೀಲನೆ ನಡೆಸುವಂತೆ ತಿಳಿಸಿದ್ದಾರೆ.

ಈ ಸಂಬಂಧ ನಿವಾಸಿಗಳು 112 ತುರ್ತು ಪೊಲೀಸ್ ಸಹಾಯವಾಣಿಗೆ ದೂರು ನೀಡಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಂಬಂಧಪಟ್ಟವರ ಛಾಯಾಚಿತ್ರಗಳನ್ನು ತೆಗೆದುಕೊಂಡು ಹೋಗಿದ್ದು, ಘಟನೆಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳು ತಮ್ಮ ಬಳಿ ಇರುವುದಾಗಿ ನಿವಾಸಿಗಳು ತಿಳಿಸಿದ್ದಾರೆ.

ಈ ಕುರಿತು ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳ ಗಮನಕ್ಕೆ ತಂದಾಗ ಪೊಲೀಸ್ ಠಾಣೆಗೆ ದೂರು ಸಲ್ಲಿಸುವಂತೆ ಸೂಚಿಸಿದ್ದ ಹಿನ್ನಲೆಯಲ್ಲಿ ನಿವಾಸಿಗಳು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಸ್ಥಳ ಪರಿಶೀಲಿಸಿ, ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬಡಾವಣೆ ನಿವಾಸಿಗಳು ಮನವಿ ಮಾಡಿದ್ದಾರೆ.

# ಹಳೆ ಪ್ರಶ್ನೆ ಪತ್ರಿಕೆಗಳಿಗೆ ಡಿಜಿಟಲ್ ರೂಪ

## ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಪ್ರಶ್ನೆ ಪತ್ರಿಕೆ ಲಭ್ಯ: ಡಿ.ಕೆ.ಮಂಜಯ್ಯ

• ಪ್ರಜೋದಯ ವರದಿ

**ಹಾಸನ:** ದೇಶದಲ್ಲಿ ಬಹುತೇಕ ಸೌಲಭ್ಯಗಳು ಇಂದು ಡಿಜಿಟಲ್ ಆಗಿ ಬದಲಾಗುತ್ತಿದ್ದು, ನಮ್ಮ ಕೈ ಬೆರಳಿನಲ್ಲಿ ವಿಶ್ವದ ಅನೇಕ ವಿಚಾರಗಳನ್ನು ಪಡೆದುಕೊಳ್ಳಬಹುದೆಂದು ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ತಿಳಿಸಿದರು.

ನಗರದ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಕ್ಯೂ.ಆರ್. ಕೋಡ್ ಬಳಸಿ ಪ್ರಶ್ನೆ ಪತ್ರಿಕೆ ಪಡೆದುಕೊಳ್ಳಿ ಎಂಬ ಹೆಸರಿನ ನೂತನ ಸೇವೆಗೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಮಾಹಿತಿ ಪಡೆದುಕೊಳ್ಳಲು ಇಂದು ಅನೇಕ ಮಾರ್ಗಗಳು ಇವೆ. ಶೈಕ್ಷಣಿಕ ಹಿತದೃಷ್ಟಿಯಿಂದ ಸಾಧ್ಯವಾದಷ್ಟು ಸುಲಭವಾಗಿ ವಿದ್ಯಾರ್ಥಿಗಳಿಗೆ ಮಾಹಿತಿ ಒದಗಿಸುವ ಕೆಲಸವನ್ನು ಮಾಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಕಾಲೇಜಿನಲ್ಲಿ ಬಹಳ ವರ್ಷಗಳಿಂದ ದಾಖಲೆ ರೂಪದಲ್ಲಿ ಇದ್ದ ಪ್ರಶ್ನೆ ಪತ್ರಿಕೆಗಳನ್ನು ಡಿಜಿಟಲ್ ರೂಪಕ್ಕೆ ರೂಪಾಂತರಿಸಿ ಇದೀಗ ಕೇವಲ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡುವ ಸೌಲಭ್ಯ ಪಡೆದುಕೊಳ್ಳಬಹುದೆಂದು ತಿಳಿಸಿದರು.



ವಿದ್ಯಾರ್ಥಿಗಳು ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಅಧ್ಯಯನ ಮಾಡಿದರೆ ಹೆಚ್ಚು ಅನುಕೂಲವಾಗಲಿದೆ. ಕಾಲೇಜಿನ ಬಿ.ಬಿ.ಎ., ಬಿ.ಕಾಂ., ಬಿ.ಸಿ.ಎ. ಹಾಗು ಬಿ.ಎ. ವಿಭಾಗದ ಪ್ರಶ್ನೆ ಪತ್ರಿಕೆಗಳಿಗೆ ಪ್ರತ್ಯೇಕವಾಗಿ ಕ್ಯೂ.ಆರ್.ಕೋಡ್ ಸೌಲಭ್ಯ ಕಲ್ಪಿಸಲಾಗಿದೆ. ವಿದ್ಯಾರ್ಥಿನಿಯರು ಕಾಲೇಜಿನಲ್ಲಿರುವ ಸೌಲಭ್ಯ ಬಳಸಿಕೊಂಡು ಶೈಕ್ಷಣಿಕವಾಗಿ ಸಾಧನೆ ಮಾಡಬೇಕೆಂದರು.

ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಗ್ರಂಥಪಾಲಕ ಡಾ.ಮರಿರಾಜ ವಾಸುದೇವ್ ಸೇಡಂ ಅವರು ಮಾತನಾಡಿ, ಆಧುನಿಕ ಕಾಲ ಘಟಕ್ಕೆ ತಕ್ಕಂತೆ ಹಾಗೆಯೇ ಇಂದಿನ ಯುವ ವಿದ್ಯಾರ್ಥಿಗಳಿಗೆ ಓದಿಗೆ ಸಹಕಾರಿ ಮಾಡುವ ಸಲುವಾಗಿ ಪುಸ್ತಕ ರೂಪದಲ್ಲಿರುವ ದಾಖಲೆಗಳನ್ನು ಡಿಜಿಟಲ್ ರೂಪಕ್ಕೆ ತರಲಾಗುತ್ತಿದೆ. ಕಾಲೇಜಿನ ಗ್ರಂಥಾಲಯವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಡಿಜಿಟಲೀಕರಣ ಮಾಡಲಾಗುವುದೆಂದು ತಿಳಿಸಿದರು.

ಅಧ್ಯಾಪಕರಾದ ಜಿ.ಆರ್.ಮೋಹನ್ ಕುಮಾರ್, ನಂದನ್, ಪಿ.ಸುರೇಶ್‌ಕುಮಾರ್, ಡಾ.ಕಾಂತೇಶ್, ಉಪನ್ಯಾಸಕರಾದ ಲೋಕೇಶ್, ದಿಲೀಪ್ ಕುಮಾರ್ ಹಾಜರಿದ್ದರು.

### ಅರಕಲಗೂಡಿನಲ್ಲಿ ಪೌಷ್ಟಿಕ ಆಹಾರ ದಿನಾಚರಣೆ

# ಆರೋಗ್ಯಕರ ಜೀವನಕ್ಕೆ ಪೌಷ್ಟಿಕ ಆಹಾರ ಅಗತ್ಯ

• ಪ್ರಜೋದಯ ವರದಿ

**ಅರಕಲಗೂಡು:** ಆರೋಗ್ಯಕರ ಜೀವನ ನಡೆಸಲು ಪೌಷ್ಟಿಕ ಹಾಗೂ ಸಮತೋಲಿತ ಆಹಾರ ಸೇವನೆ ಅಗತ್ಯ. ಪ್ರತಿಯೊಬ್ಬರೂ ಪೌಷ್ಟಿಕಾಂಶಯುಕ್ತ ಆಹಾರಕ್ಕೆ ಆದ್ಯತೆ ನೀಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜೆಎಂಎಫ್‌ಸಿ ನ್ಯಾಯಾಧೀಶರಾದ ಎನ್.ದೀಪಿಕಾ ಅವರು ಹೇಳಿದರು.



ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಹಾಗೂ ಶಿಶು ಅಭಿವೃದ್ಧಿ ಯೋಜನಾ ಇಲಾಖೆ ವತಿಯಿಂದ ಆಯೋಜಿಸಿದ್ದ ಪೌಷ್ಟಿಕ ಆಹಾರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಎಣ್ಣೆಯಲ್ಲಿ ಕರಿದ ಹಾಗೂ ಅತಿಯಾದ ಕೊಬ್ಬಿನ ಅಂಶವಿರುವ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸುವುದನ್ನು ತಪ್ಪಿಸಬೇಕು. ಮೊಳಕೆ ಕಾಳುಗಳು, ಹಣ್ಣು-ಹಂಪಲು, ಸೊಪ್ಪು, ತರಕಾರಿಗಳು ಸೇರಿ ಕಬ್ಬಿಣ ಹಾಗೂ ಇತರೆ ಅಗತ್ಯ ಪೋಷಕಾಂಶ ಹೊಂದಿರುವ ಆಹಾರವನ್ನು ನಿಯಮಿತವಾಗಿ ಸೇವಿಸಬೇಕು. ದೇಹಕ್ಕೆ ಬೇಕಾದ ಪೋಷಕಾಂಶಗಳು ದೊರೆತು ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆಂದು ಸಲಹೆ ನೀಡಿದರು.

ತಹಶೀಲ್ದಾರ್ ಸೌಮ್ಯ ಅವರು ಮಾತನಾಡಿ, ಆರೋಗ್ಯವಂತ ತಾಯಂದಿರಿಂದಲೇ ಆರೋಗ್ಯವಂತ ಮಕ್ಕಳ ಬೆಳವಣಿಗೆ ಸಾಧ್ಯ. ಹೀಗಾಗಿ ಗರ್ಭಿಣಿಯರು ಗರ್ಭಾವಸ್ಥೆಯಲ್ಲಿಯೂ ಹಾಗೂ ಹೆರಿಗೆಯ ನಂತರವೂ ಪೌಷ್ಟಿಕ ಆಹಾರ ಸೇವಿಸುವ ಮೂಲಕ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕೆಂದು ಹೇಳಿದರು.

ವಕೀಲರಾದ ಸ್ವಾತಿ ಜೆ.ವಿ.ಗುಪ್ತ ಅವರು ಮಾತನಾಡಿ, ಪೌಷ್ಟಿಕ ಆಹಾರವೆಂದರೆ ಕೇವಲ ಹೊಟ್ಟೆ ತುಂಬಿಸುವ ಆಹಾರವಲ್ಲ. ಅದು ದೇಹದ ಆರೋಗ್ಯ ಹಾಗೂ ಶಕ್ತಿಗೆ ಪ್ರಮುಖ ಆಧಾರವಾಗಿದೆ. ವಿಶೇಷವಾಗಿ ಗರ್ಭಾವಸ್ಥೆಯಲ್ಲಿ ಮಹಿಳೆಯರು ಹೆಚ್ಚಿನ ಪೋಷಕಾಂಶಗಳನ್ನು ಒಳಗೊಂಡ ಆಹಾರ ಸೇವಿಸುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂದರು.

ಮಹಿಳೆಯರಲ್ಲಿ ರಕ್ತಹೀನತೆ ಸಮಸ್ಯೆ ಕಂಡುಬರುತ್ತಿದ್ದು, ಆರೋಗ್ಯದ ಸಮಸ್ಯೆಗಳಿಗೆ ವೈದ್ಯರ ಸಲಹೆ ಪಡೆಯದೆ ಸ್ವಯಂ ಔಷಧಿಗಳನ್ನು ಸೇವಿಸುವುದು ಸೂಕ್ತವಲ್ಲ. ಯಾವುದೇ ಆರೋಗ್ಯ ಸಮಸ್ಯೆ ಎದುರಾದಾಗ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕೆಂದರು.

ಕಾರ್ಯಕ್ರಮದ ಅಂಗವಾಗಿ ಗರ್ಭಿಣಿ ತಾಯಂದಿರಿಗೆ ಸೀಮಂತ ಕಾರ್ಯಕ್ರಮನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಗೆ ಅನ್ನಪ್ರಾಶನ ಕಾರ್ಯಕ್ರಮ ನಡೆಸಲಾಯಿತು.

ಸಹಾಯಕಸರ್ಕಾರಿ ಅಭಿಯೋಜಕ ಬಿ.ಬಿ.ಶಿವಪ್ಪ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀನಿವಾಸ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೆಂಕಟೇಶ್, ವಕೀಲರ ಸಂಘದ ಅಧ್ಯಕ್ಷ ಬಿ.ಟಿ. ಚಂದ್ರಶೇಖರ್, ಕಾರ್ಯದರ್ಶಿ ಕೆ.ಎಸ್. ಕಾಮಾಕ್ಷ, ಜಂಟಿ ಕಾರ್ಯದರ್ಶಿ ಎಸ್.ಪವಿತ್ರ, ಅಪರ ಸರ್ಕಾರಿ ವಕೀಲರಾದ ಡಿ.ಆರ್.ಆನಂದ್, ಕೆ.ಆರ್.ವಿಜಯ್ ಕುಮಾರ್ ಇತರರು ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK